ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily
ಡಿಜಿಟಲ್ ನ್ಯೂಸ್ ಚಾನಲ್
ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010100 L2/RNP-1285/TMR/2025-27

Volume: 05 ಸಂಪುಟ: 05 | Issue: 231 ಸಂಚಿಕೆ: 231 | Date: 23-10-2026 Friday | RNI NO : KARKAN/2021/80805 | L2/RNP-1285/TMR/2025-27 | Page: 4 ಪುಟ : 4 | Price: 1.00 ಬೆಲೆ: 1.00 ರೂ

ಕ್ಷಣ ಸುದ್ದಿ



ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆಗೆ ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ ಮತಗಟ್ಟೆಗಳಿಗೆ ಜಿಲ್ಲಾಧಿಕಾರಿ ಕಚೇರಿಯಿಂದ ಮತ ಪೆಟ್ಟಿಗೆಗಳನ್ನು ಕೊಂಡೊಯ್ಯಲಾಯಿತು.

'ಜ್ಞಾನಸಿರಿ' ಕ್ಯಾಂಪಸ್ ಬಳಿ ಚಿರತೆ ಪ್ರತ್ಯಕ್ಷ



ತುಮಕೂರು: ತುಮಕೂರು ವಿಶ್ವವಿದ್ಯಾನಿಲಯದ 'ಜ್ಞಾನಸಿರಿ' ಕ್ಯಾಂಪಸ್ ಹಾಗೂ ತುಮಕೂರು ತಾಲೂಕಿನ ತಿಮ್ಮಸಂದ್ರ ಗ್ರಾಮದ ಸುತ್ತಮುತ್ತ ಚಿರತೆಯೊಂದು ಪ್ರತ್ಯಕ್ಷಗೊಂಡಿದ್ದು, ಸ್ಥಳೀಯ ಜನರಲ್ಲಿ ಭೀತಿಯ ವಾತಾವರಣ ನಿರ್ಮಾಣವಾಗಿದೆ.ಬೆಳಗಿನ ಜಾವ ತಿಮ್ಮಸಂದ್ರ ಗ್ರಾಮದ ವ್ಯಕ್ತಿಯೊಬ್ಬರ ಮನೆಯೊಳಗೆ ನುಗ್ಗಿದ ಚಿರತೆ, ಅಲ್ಲಿದ್ದ ಕೋಳಿಯನ್ನು ಬೇಟೆಯಾಡಿದೆ. ಬಳಿಕ ಯಾರೋ ಬರುವಷ್ಟರಲ್ಲಿ ಸಮೀಪದ ತೆಂಗಿನ ಮರವೇರಿ ಕುಳಿತುಕೊಂಡಿದೆ. ಇದನ್ನು ಕಂಡು ಬೆಚ್ಚಿಬಿದ್ದ ಗ್ರಾಮಸ್ಥರು ತಕ್ಷಣವೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಅರಣ್ಯ ಇಲಾಖೆ ಕಣ್ಣೆದುರೇ ಪರಾರಿಯಾದ ಚಿರತೆ ವಿಷಯ ತಿಳಿದು ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಸೆರೆಗೆ ಕಾರ್ಯಾಚರಣೆ ಆರಂಭಿಸಿದರು. ಆದರೆ, ಸಿಬ್ಬಂದಿ ಹಾಗೂ ಜನರ ಕಣ್ಣೆದುರಲ್ಲೇ ಚಿರತೆ ಮರದಿಂದ ಇಳಿದು ಕಾಲ್ಕಿತ್ತಿದ್ದು, ಸಮೀಪದ ಕಾಡಿನೊಳಗೆ ಪರಾರಿಯಾಗಿದೆ. ಚಿರತೆ ಸೆರೆಸಿಗದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಗ್ರಾಮಸ್ಥರು, ಕೂಡಲೇ ಚಿರತೆಯನ್ನು ಬಂದೂಕಿನಿಂದ ಅರಿಳಿಕೆ ಮದ್ದು ನೀಡಿ ಇಲ್ಲವೇ ಬೋನು ಬಳಸಿ ಸೆರೆಹಿಡಿಯುವಂತೆ ಪಟ್ಟು ಹಿಡಿದರು.

ಅ.29ರಂದು ಅಕ್ಕಿ ಬಹಿರಂಗ ಹರಾಜು

ತುಮಕೂರು: ಜಿಲ್ಲೆಯ ಕೊರಟಗೆರೆ ತಾಲ್ಲೂಕು ಚನ್ನರಾಯನದುರ್ಗ ಹೋಬಳಿ ಬೂದಗವಿ ಶ್ರೀ ಸಿದ್ದೇಶ್ವರಸ್ವಾಮಿ ದೇವಾಲಯಕ್ಕೆ ಸೇರಿದ ದಾಸೋಹ ನಿಲಯದ ಉಗ್ರಾಣದಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗಿರುವ ಅಕ್ಕಿಯನ್ನು ಅಕ್ಟೋಬರ್ 29ರಂದು ಬೆಳಗ್ಗೆ 11 ಗಂಟೆಗೆ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಹರಾಜನ್ನು ಶ್ರೀ ಸಿದ್ದೇಶ್ವರಸ್ವಾಮಿ ದೇವಾಲಯದ ಆಡಳಿತ ಕಚೇರಿಯ ಆವರಣದಲ್ಲಿ ಬಹಿರಂಗವಾಗಿ ವಿಲೇವಾರಿ ಮಾಡಲಾಗುವುದು. ಆಸಕ್ತರು ಹರಾಜಿನಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮತ ಚಲಾಯಿಸಲು ಗುರುತಿನ ಚೀಟಿ ಕಡ್ಡಾಯ



ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ : ತುಮಕೂರು(ಕ.ವಾ.)ಅ.22: ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನ ಪರಿಷತ್ತಿನ ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ–2026ರ ಸಂಬಂಧ ಮತದಾನದ ದಿನದಂದು ಮತದಾರರ ಗುರುತಿಗಾಗಿ ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯೊಂದಿಗೆ ಪರ್ಯಾಯ 10 ಗುರುತಿನ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಮೂಲ ಪ್ರತಿಯಲ್ಲಿ ಹಾಜರುಪಡಿಸಿ ಮತ ಚಲಾಯಿಸಲು ಅವಕಾಶ ಕಲ್ಪಿಸಿದೆ.

ಆಧಾರ್ ಕಾರ್ಡ್; ಚಾಲನಾ ಪರವಾನಗಿ; ಪ್ಯಾನ್ ಕಾರ್ಡ್; ಭಾರತೀಯ ಪಾಸ್‌ಪೋರ್ಟ್; ರಾಜ್ಯ/ಕೇಂದ್ರ ಸರ್ಕಾರ, ಸಾರ್ವಜನಿಕ ವಲಯದ ಉದ್ಯಮಗಳು, ಸ್ಥಳೀಯ ಸಂಸ್ಥೆಗಳು ಅಥವಾ ಖಾಸಗಿ ಕೈಗಾರಿಕಾ ಸಂಸ್ಥೆಗಳು ತಮ್ಮ ನೌಕರರಿಗೆ ನೀಡಿರುವ ಸೇವಾ ಗುರುತಿನ ಚೀಟಿ; ಸಂಸದರು/ಶಾಸಕರು/ವಿಧಾನ ಪರಿಷತ್ ಸದಸ್ಯರಿಗೆ ನೀಡಲಾದ ಅಧಿಕೃತ ಗುರುತಿನ ಚೀಟಿ; ಸಂಬಂಧಪಟ್ಟ ಪದವೀಧರರ/ಶಿಕ್ಷಕರ ಕ್ಷೇತ್ರದ ಮತದಾರರು ಉದ್ಯೋಗದಲ್ಲಿರುವ ಶಿಕ್ಷಣ ಸಂಸ್ಥೆಗಳು ನೀಡಿರುವ ಸೇವಾ ಗುರುತಿನ ಚೀಟಿ; ವಿಶ್ವವಿದ್ಯಾನಿಲಯವು ನೀಡಿರುವ ಪದವಿ/ಡಿಪ್ಲೋಮಾ ಪ್ರಮಾಣಪತ್ರ(ಮೂಲ ಪ್ರತಿ); ಸಕ್ಷಮ ಪ್ರಾಧಿಕಾರವು ನೀಡಿರುವ ವಿಕಲಚೇತನ ಪ್ರಮಾಣ ಪತ್ರ(ಮೂಲ ಪ್ರತಿ), ಯುಡಿಐಡಿ ಕಾರ್ಡ್‌ನಲ್ಲಿ ಯಾವುದಾದರೂ ಒಂದನ್ನು ಮೂಲ ಪ್ರತಿಯಲ್ಲಿ ಹಾಜರುಪಡಿಸಿ ಮತ ಚಲಾಯಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಗ್ರಾಮಕ್ಕೆ ಬಂದ ಕರಡಿ



ಮಧುಗಿರಿ,:ಆಹಾರ ಅರಸಿ ಕಾಡಿ ನಿಂದ ನಾಡಿಗೆ ಬಂದ ಕರಡಿಯೊಂದು ಆಹಾರ ಸಿಗದೆ ನಿತ್ರಾಣಗೊಂಡು ತೋಟವೊಂದರ ಕುರಿಶೆಡ್ ಬಳಿ ವಿಶ್ರಾಂತಿ ಪಡಿದು ತೆರಳುತ್ತಿದ್ದ ದೃಶ್ಯ ತಾಲೂಕಿನ ಸಿದ್ದಾಪುರ ಗ್ರಾಮದಲ್ಲಿ ಕಂಡುಬಂದಿದೆ.

ಗ್ರಾಮಕ್ಕೆ ಬಂದ ಕರಡಿ ರಾತ್ರಿಯಿಡೀ ಆಹಾರಕ್ಕಾಗಿ ಸುತ್ತಾಡಿ ಎಲ್ಲೂ ಅಹಾರ ಸಿಗದೆ ನಿತ್ರಾಣಗೊಂಡು ಕೊನೆಗೆ ಗ್ರಾಮದ ಗೌತಮ್ ಎಂಬುವವರ ತೊಟದಲ್ಲಿರುವ ಕುರಿಶೆಡ್ ಬಳಿ ಬಂದು ಮಲಗಿ ಕೆಲಕಾಲ ವಿಶ್ರಾಂತಿ ಪಡೆದು ಮುಂಜಾನೆ ಕಾಡಿನತ್ತ ಹೆಜ್ಜೆಹಾಕಿರುವ ದೃಶ್ಯ ಕುರಿಶೆಡ್ ಬಳಿ ಇರುವ ಸಿಸಿಕ್ಯಾಮಾರಾದಲ್ಲಿ ಸೆರೆಯಾಗಿದೆ.ತಾಲೂಕಿನ ವಿವಿಧ ಗ್ರಾಮಗಳಲ್ಲಿ ರಾತ್ರಿ ವೇಳೆ ಕರಡಿಗಳ ಸಂಚಾರ ಮಾಲೂಲಿ. ಆದರೆ ಈ ಬಾರಿ ಮಳೆಯ ಕೊರತೆಯಿಂದ ಕುಡಿಯುವ ನೀರು, ಆಹಾರಕ್ಕೆ ಕಾಡಿನಲ್ಲಿ ತೊಂದರೆಯಾಗಿದ್ದು ನಾಡಿನತ್ತ ವನ್ಯಪ್ರಾಣಿಗಳು ಬರುತ್ತಿವೆ. ಹಾಗಾಗಿ ಗ್ರಾಮಸ್ಥರು ಎಚ್ಚರಿಕೆ ವಹಿಸುವುದು ಉತ್ತಮ. ರಾತ್ರಿ ವೇಳೆ ಒಂಟಿಯಾಗಿ ತೋಟ–ಜಮೀನುಗಳ ಬಳಿ ತೆರಳಬೇಡಿ ಎಂದು ಗ್ರಾಮದ ಮುಖಂಡ ರವಿಕಾಂತೇಗೌಡ ಮನವಿ ಮಾಡಿಕೊಂಡಿದ್ದಾರೆ.

ದಲಿತರು ದೇಶಕ್ಕೆ ಅದ್ಭುತ ಕೊಡುಗೆ ನೀಡಿದ್ದಾರೆ, ಆ ಸಮುದಾಯದ ಸಚಿವರನ್ನು ತಡೆದದ್ದು ಖಂಡನೀಯ

ಸೂರ್ಯಪ್ರಗತಿನ್ಯೂಸ್.ಕಾಂ





ಚಿಕ್ಕಬಳ್ಳಾಪುರ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಅವರು, ದಲಿತ ಸಮುದಾಯದ ಮೂವರು ಸಚಿವರ ಪರವಾಗಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಂಚಿಕೊಳ್ಳುವ ಮೂಲಕ ಬೆಂಬಲ ವ್ಯಕ್ತಪಡಿಸಿದ್ದಾರೆ.

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ವೇಳೆ ಪೊಲೀಸರ್ ಅಧಿಕಾರಿಯೊಬ್ಬರು ದಲಿತ ಸಮುದಾಯದ ಮೂವರು ಸಚಿವರನ್ನು ತಡೆದ ವಿಚಾರ ಇದೀಗ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಇದೀಗ ಘಟನೆ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಚಿಕ್ಕಬಳ್ಳಾಪುರ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಅವರು, ದಲಿತ ಸಮುದಾಯದ ಮೂವರು ಸಚಿವರ ಪರವಾಗಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಂಚಿಕೊಳ್ಳುವ ಮೂಲಕ ಬೆಂಬಲ ವ್ಯಕ್ತಪಡಿಸಿದ್ದಾರೆ.

ದಲಿತ ಸಮುದಾಯದ ಸಚಿವರ ಪರವಾಗಿ ಧ್ವನಿ ಎತ್ತಿರುವ ಪ್ರದೀಪ್ ಈಶ್ವರ್ ಅವರು, ದಲಿತ ಸಮುದಾಯದ ಹಿರಿಯ ಸಚಿವರಾದ ನರೇಂದ್ರಸ್ವಾಮಿ, ಶಿವರಾಜ್ ತಂಗಡಗಿ ಮತ್ತು ಬಸವಂತಪ್ಪ ಅವರನ್ನು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಯೊಬ್ಬ ನಿನ್ನೆ ನಡೆದ ದಸರಾ ಕಾರ್ಯಕ್ರಮದಲ್ಲಿ ತಡೆದಿದ್ದಾರೆ. ಇದು ಖಂಡಿತವಾಗಿಯೂ ಬೇಸರದ ಸಂಗತಿ. ಈ ನಡೆಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ ಮತ್ತು ರಾಜ್ಯ ಸರ್ಕಾರ ಹಾಗೂ ನಮ್ಮ ಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತೇನೆ, ದಯವಿಟ್ಟು ಆ ಪೊಲೀಸ್ ಅಧಿಕಾರಿಯ ವಿರುದ್ಧ ಅಗತ್ಯ ಕಾನೂನು ಕ್ರಮ ಕೈಗೊಳ್ಳಿ ಎಂದು ವಿನಂತಿಸುವುದಾಗಿ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮುಂದಿನ ಐದು ದಿನ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ: ಹವಾಮಾನ ಇಲಾಖೆ ಮುನ್ಸೂಚನೆ

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಅನೇಕ ಕಡೆಗಳಲ್ಲಿ ಸಾಧಾರಣದಿಂದ ಮಧ್ಯಮ ಅಥವಾ ಗುಡುಗು ಸಹಿತ ಮಳೆಯಾಗಲಿದೆ. ಉತ್ತರ ಕನ್ನಡ ಜಿಲ್ಲೆಯ ಅನೇಕ ಕಡೆಗಳಲ್ಲಿ ಲಘು ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ಬೆಂಗಳೂರು: ಮುಂದಿನ ಐದು ದಿನ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆಯನ್ನು ಭಾರತೀಯ ಹವಾಮಾನ ಇಲಾಖೆ ನೀಡಿದೆ.

ನಾಳೆ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಅನೇಕ ಕಡೆಗಳಲ್ಲಿ ಸಾಧಾರಣದಿಂದ ಮಧ್ಯಮ ಅಥವಾ ಗುಡುಗು ಸಹಿತ ಮಳೆಯಾಗಲಿದೆ. ಉತ್ತರ ಕನ್ನಡ ಜಿಲ್ಲೆಯ ಅನೇಕ ಕಡೆಗಳಲ್ಲಿ ಲಘು ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳ ಒಂದೆರೆಡು ಕಡೆಗಳಲ್ಲಿ ಹಗುರ ಅಥವಾ ಗುಡುಗು ಸಹಿತ ಮಳೆಯಾಗಲಿದ್ದು, ಗಾಳಿಯು ಗಂಟೆಗೆ 30 ರಿಂದ 40 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

ಮೈಸೂರು ದಸರಾದಲ್ಲಿ ಪ್ರೋಟೋಕಾಲ್ ಎಡವಟ್ಟು: ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಜೆಡಿಎಸ್ ಮಾಜಿ ಶಾಸಕ ಆಗ್ರಹ

ಸೂರ್ಯಪ್ರಗತಿನ್ಯೂಸ್.ಕಾಂ





ಮೈಸೂರು ದಸರಾ ಜಂಬೂ ಸವಾರಿ ವೇಳೆ ಸಚಿವರಿಗೆ ಅಪಮಾನ ಆರೋಪ; ಪ್ರೋಟೋಕಾಲ್ ವೈಫಲ್ಯದ ಹೊಣೆ ಹೊತ್ತು ಸಚಿವ ಸ್ಥಾನಕ್ಕೆ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡುವಂತೆ ಆಗ್ರಹಿಸಿ ಜೆಡಿಎಸ್ ಮಾಜಿ ಶಾಸಕ ಅಶ್ವಿನ್ ಕುಮಾರ್ ಆಗ್ರಹ.

ಬೆಂಗಳೂರು: ಮೈಸೂರು ದಸರಾ ಮಹೋತ್ಸವದ ನಂದಿಧ್ವಜ ಪೂಜೆ ವೇಳೆ ದಲಿತ ಸಮುದಾಯಕ್ಕೆ ಸೇರಿದ ಸಚಿವರನ್ನು ಪೊಲೀಸರು ತಡೆದು ಅಪಮಾನಿಸಿದ್ದಾರೆ ಎಂಬ ಆರೋಪ ರಾಜಕೀಯ ವಲಯದಲ್ಲಿ ತೀವ್ರ ಸ್ವರೂಪ ಪಡೆದುಕೊಂಡಿದೆ. ಈ ಘಟನೆಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿವೆ. ಈ ಬೆನ್ನಲ್ಲೇ, "ಶಿಷ್ಟಾಚಾರ (ಪ್ರೋಟೋಕಾಲ್) ಪ್ರಿಯಾಂಕ್ ಖರ್ಗೆ ಅವರ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ, ಈ ಘಟನೆಯ ಸಂಪೂರ್ಣ ಹೊಣೆ ಹೊತ್ತು ಅವರು ರಾಜೀನಾಮೆ ನೀಡಬೇಕೆಂದು" ಜೆಡಿಎಸ್ ಮಾಜಿ ಶಾಸಕ ಅಶ್ವಿನ್ ಕುಮಾರ್ ಆಗ್ರಹಿಸಿದ್ದಾರೆ. ಆ ಕುರಿತ ವರದಿ ಇಲ್ಲಿದೆ:

ಏನಿದು ಘಟನೆ?

ಜಂಬೂಸವಾರಿ ದಿನ ಅಂದರೆ ನಿನ್ನೆ (ಅ.21) ಮೈಸೂರು ಅರಮನೆ ಆವರಣದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ನಂದಿ ಧ್ವಜದ ಪೂಜೆಗೆ ತೆರಳುತ್ತಿದ್ದ ಸಚಿವರಾದ ಶಿವರಾಜ್ ತಂಗಡಗಿ, ನರೇಂದ್ರ ಸ್ವಾಮಿ, ಬಸವಂತಪ್ಪ ಅವರನ್ನು ಎಸ್ಪಿ ಸಿ.ಬಿ.ರಿಷ್ಯಂತ್ ತಡೆದಿದ್ದರು. ಈ ನಡವಳಿಕೆಯನ್ನು ಖಂಡಿಸಿರುವ ಟಿ ನರಸೀಪುರಕ್ಷೇತ್ರದ ಜೆಡಿಎಸ್ ಮಾಜಿ ಶಾಸಕ ಅಶ್ವಿನ್ ಕುಮಾರ್, ಇದು ದಲಿತ ಸಚಿವರಿಗೆ ಮಾಡಿದ ಅಪಮಾನ ಎಂದು ಬೆಂಗಳೂರಿನ ಜೆ.ಪಿ. ಭವನದಲ್ಲಿ ಮಾಧ್ಯಮಗಳ ಮುಂದೆ ಸರ್ಕಾರದ ವಿರುದ್ಧ ನೇರ ವಾಗ್ದಾಳಿ ನಡೆಸಿದ್ದಾರೆ.

ಮುಂದುವರೆದು, "ಈ ಹಿಂದೆ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಎಲ್ಲಾ ವರ್ಗದ ನಾಯಕರನ್ನು ಗೌರವದಿಂದ ಜತೆಯಾಗಿ ಕರೆದೊಯ್ಯಲಾಗುತ್ತಿತ್ತು. ಆದರೆ ಈಗ ದಲಿತ ಸಚಿವರು ಕಾರ್ಯಕ್ರಮದಲ್ಲಿ ಭಾಗವಹಿಸಬಾರದು ಎಂಬ ಉದ್ದೇಶದಿಂದ ಈ ರೀತಿ ಮಾಡಲಾಗಿದೆಯೇ ಎಂದು ಅಶ್ವಿನ್ ಕುಮಾರ್ ಪ್ರಶ್ನಿಸಿದ್ದಾರೆ. ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿಗಳಿಗೆ ವೇದಿಕೆಗೆ ಆಗಮಿಸುವ ಸಚಿವರ ಗುರುತು ಇರಲಿಲ್ಲವೇ ಎಂದು ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ದಸರಾ ಮಹೋತ್ಸವದ ನಿರ್ವಹಣೆಗೆ ಮುಖ್ಯಮಂತ್ರಿಗಳು ಇಪ್ಪತ್ತೆರಡು ಸಚಿವರಿಗೆ ಜವಾಬ್ದಾರಿ ಹಂಚಿಕೆ ಮಾಡಿದ್ದರು. ಹೀಗಿದ್ದರೂ ಜಂಬೂ ಸವಾರಿಯಂತಹ ಮಹತ್ವದ ಕ್ಷಣದಲ್ಲಿ ಸಚಿವರಿಗೆ ತಡೆ ಒಡ್ಡಿರುವುದು ಅವಮಾನಕರ ಸಂಗತಿ ಎಂದು ಪ್ರತಿಪಾದಿಸಿದ್ದಾರೆ. ಹಾಗಾಗಿ, ರಾಜ್ಯದಲ್ಲಿ ಶಿಷ್ಟಾಚಾರದ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ವ್ಯಾಪ್ತಿಗೆ ಬರುವುದರಿಂದ, ಈ ಪ್ರೋಟೋಕಾಲ್ ವೈಫಲ್ಯದ ಸಂಪೂರ್ಣ ಹೊಣೆ ಹೊತ್ತು ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ನಗರದ ಮೆರುಗು ಹೆಚ್ಚಿಸಿದ ತುಮಕೂರು ದಸರಾ ಜಂಬು ಸವಾರಿ

ಸೂರ್ಯಪ್ರಗತಿನ್ಯೂಸ್.ಕಾಂ





ತುಮಕೂರು: ತುಮಕೂರು ದಸರಾ ಉತ್ಸವದ ಅಂಗವಾಗಿ ಉಪಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಅವರು ಬುಧವಾರ ಮಧ್ಯಾಹ್ನ ನಗರದ ಬಿ.ಜಿ.ಎಸ್. ವೃತ್ತದ ಬಳಿ ಸಾಂಪ್ರದಾಯಿಕವಾಗಿ ನದೀಧ್ವಜಕ್ಕೆ ಪೂಜೆ ನೆರವೇರಿಸಿ ಚಾಲನೆ ನೀಡಿದ ವೈಭವಯುತ ಜಂಬೂ ಸವಾರಿ ಮೆರವಣಿಗೆಯು ನಗರದ ಮೆರುಗನ್ನು ಮತ್ತಷ್ಟು ಹೆಚ್ಚಿಸುವಲ್ಲಿ ಯಶಸ್ವಿಯಾಯಿತು.

ಜಂಬೂಸವಾರಿ ಮೆರವಣಿಗೆಯ ಪ್ರಮುಖ ಆಕರ್ಷಣೆ ಎಂದರೆ ಅಂಬಾರಿ ಹೊತ್ತಿದ್ದ ಲಕ್ಷ್ಮಣ ಆನೆ. ಮೈಸೂರು ದಸರಾ ಸಂಪ್ರದಾಯವನ್ನು ನೆನಪಿಸುವಂತೆ ಲಕ್ಷ್ಮಣನನ್ನು ಬಣ್ಣ–ಬಣ್ಣದ ವಸ್ತ್ರ ಹಾಗೂ ಹೂಗಳಿಂದ ಅಲಂಕರಿಸಿ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿ ದೇವಿಯನ್ನು ಕುಳ್ಳಿರಿಸಲಾಗಿತ್ತು. ದುಬಾರೆಯಿಂದ ಬಂದಿದ್ದ ಲಕ್ಷ್ಮಣನ ಪಕ್ಕದಲ್ಲಿ ಸಾಗಿದ ಎರಡು ಲಕ್ಷ್ಮೀ ಆನೆಗಳು ಗಾಂಭೀರ್ಯದಿಂದ ಮೆರವಣಿಗೆಯ ಸೊಬಗನ್ನು ಇಮ್ಮಡಿಗೊಳಿಸಿದವು. ತುಮಕೂರಿನಲ್ಲಿ 3ನೇ ಬಾರಿ ಜರುಗುತ್ತಿರುವ ಈ ಜಂಬೂಸವಾರಿಯನ್ನು ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮ ಕಣ್ತುಂಬಿಕೊಂಡಿತು. ನಗರದಲ್ಲಿ ಸಂಭ್ರಮದ ವಾತಾವರಣವನ್ನು ಸೃಷ್ಟಿಸಿದ್ದ ಜಂಬೂಸವಾರಿ ಮೆರವಣಿಗೆಯಲ್ಲಿ ಲಕ್ಷ್ಮೀ ಆನೆಗಳ ಗಾಂಭೀರ್ಯ, ಲಕ್ಷ್ಮಣನ ಧೈರ್ಯ, ಇವುಗಳ ನಡುವೆ ಶ್ರೀ ಚಾಮುಂಡೇಶ್ವರಿ ದೇವಿಯ ಮೆರವಣಿಗೆಯು ನಿಜಕ್ಕೂ "ಮೈಸೂರು ದಸರಾ ಎಷ್ಟೊಂದು ಸುಂದರ" ಎಂಬ ಹಾಡಿನ ಸಾಲುಗಳನ್ನು ಮೆಲುಕು ಹಾಕುವಂತೆ ಮಾಡಿತು. ಮೆರವಣಿಗೆಯನ್ನು ವೀಕ್ಷಿಸಲು ದಾರಿಯುದ್ದಕ್ಕೂ ಅಲ್ಲಲ್ಲಿ ಗ್ಯಾಲರಿಗಳನ್ನು ನಿರ್ಮಿಸಲಾಗಿತ್ತು. ಅನೇಕರು ತಮ್ಮ ಮೊಬೈಲ್ ಕ್ಯಾಮೆರಾಗಳಲ್ಲಿ ಜಂಬೂಸವಾರಿಯ ದೃಶ್ಯಗಳನ್ನು ಸೆರೆ ಹಿಡಿದು ಅಮೂಲ್ಯ ನೆನಪುಗಳನ್ನು ತಮ್ಮದಾಗಿಸಿಕೊಂಡರು.

ಜಂಬೂಸವಾರಿ ಭವ್ಯ ಮೆರವಣಿಗೆಯಲ್ಲಿ ತುಮಕೂರು ತಾಲ್ಲೂಕು ಕಚೇರಿಯ ಗಣಪತಿ, ಮಂಡಿಪೇಟೆಯ ಶ್ರೀ ಭದ್ರಕಾಳಿ ಹಾಗೂ ಶ್ರೀ ರಾಜರಾಜೇಶ್ವರಿ ಗಂಗಾಭವಾನಿ, ಚಿಕ್ಕಪೇಟೆಯ ಶ್ರೀ ಕೋಟೆ ಆಂಜನೇಯಸ್ವಾಮಿ, ಶ್ರೀ ಕನ್ನಿಕಾಪರಮೇಶ್ವರಸ್ವಾಮಿ, ವಿಶ್ವಕರ್ಮ ಕಾಳಿಕಾಂಬ, ಬ್ರಹ್ಮಕುಮಾರಿ ಈಶ್ವರಿ, ಅಂಕಾಲೇಶ್ವರಿ ಹಾಗೂ ನಾಲ್ಕು ಗಾಲಿ ಬಾವಿ ಗಣೇಶ, ದಿಬ್ಬೂರಿನ ಶ್ರೀ ಮುಳಕಟ್ಟಮ್ಮ, ವಿನಾಯಕ ನಗರದ ಶ್ರೀ ಆದಿಶಕ್ತಿ ಅಮ್ಮ, ಮಾರಿಯಮ್ಮ ನಗರದ ಮಾರಿಯಮ್ಮ ದೇವಿ, ಶ್ರೀ ವೀರಭದ್ರಸ್ವಾಮಿ ಸೇರಿದಂತೆ 33ಕ್ಕೂ ಹೆಚ್ಚು ಗ್ರಾಮ ದೇವತೆಗಳು ಹೂಗಳಿಂದ ಅಲಂಕರಿಸಲ್ಪಟ್ಟ ಸಾರೋಟು(ಬೆಳ್ಳಿ ರಥ)ಗಳಲ್ಲಿ ಸಾಗಿದ್ದು, ಜನರಲ್ಲಿ ಅದ್ವಿತೀಯ ಭಕ್ತಿ ಭಾವ ಮೂಡಿಸಿತು.

ಜಂಬೂಸವಾರಿ ಮೆರವಣಿಗೆಯಲ್ಲಿ ಸಾಲಾಗಿ ಸಾಗಿದ ದೇವರ ಉತ್ಸವ ಮೂರ್ತಿಗಳಿಗೆ ಗಣ್ಯರು ಪುಷ್ಪಾರ್ಚನೆ ಅರ್ಪಿಸಿದರು. ಮೆರವಣಿಗೆ ಮಾರ್ಗದಲ್ಲಿ ಮಹಿಳೆಯರ ಪೂರ್ಣಕುಂಭ ಕಳಶ, ಪೊಲೀಸ್ ಅಶ್ವದಳ, ನಂದಿಧ್ವಜ, ಸೋಮನಕುಣಿತ, ಗೊರವರ ಕುಣಿತ, ತಮಟೆ, ಹಗಲು ವೇಷ, ಹುಲಿ ವೇಷ, ಯಕ್ಷಗಾನ, ವೀರಗಾಸೆ, ಅರೆವಾದ್ಯ, ಗಾರುಡಿ ಗೊಂಬೆ, ಕೀಲು ಕುದುರೆ, ಡೊಳ್ಳು ಕುಣಿತ, ತಾಳ ಮದ್ದಳೆ ಸೇರಿದಂತೆ ನೂರಾರು ಕಲಾ ತಂಡಗಳು ಕಲಾ ಪ್ರದರ್ಶನ ನೀಡುತ್ತಾ ಸಾಗಿದವು. ವಿಶೇಷವಾಗಿ ಗಾರುಡಿ ಗೊಂಬೆಗಳ ಉದ್ದನೆಯ ಪ್ರತಿರೂಪಗಳು ಮಕ್ಕಳ ಗಮನ ಸೆಳೆದವು. ಡೊಳ್ಳಿನ ದನಿಗೆ ಹೆಜ್ಜೆ ಹಾಕಿದ ವೀರರು ಭಕ್ತರನ್ನು ಆಕರ್ಷಿಸಿದರು. ದಾರಿಯುದ್ದಕ್ಕೂ ಮಕ್ಕಳಿಂದ ವೃದ್ಧರಾದಿಯಾಗಿ ಮೆರವಣಿಗೆಯಲ್ಲಿ ಸಂಭ್ರಮದಿಂದ ಪಾಲ್ಗೊಂಡಿದ್ದರು.

ನೂರಾರು ಕಲಾತಂಡಗಳ ಕಲಾ ವೈಭವ, ಜಿಲ್ಲೆಯ ವಿವಿಧ ದೇವರ ಉತ್ಸವಮೂರ್ತಿಗಳ ರಥಯಾತ್ರೆ, ಗಜಪಡೆಯ ಸೊಬಗು ಇವೆಲ್ಲವೂ ಸೇರಿ ಈ ವರ್ಷದ ತುಮಕೂರು ದಸರಾ ಜಂಬೂಸವಾರಿಯು ಜನಮನದಲ್ಲಿ ಅಜರಾಮರ ನೆನಪು, ನಗರದ ಬೀದಿಗಳನ್ನು ಜೀವಂತಗೊಳಿಸಿದ ಈ ಮೆರವಣಿಗೆ ನಾಡಹಬ್ಬದ ನಿಜವಾದ ಭಾವವನ್ನು ಮೂಡಿಸಿತು.ಜಂಬೂ ಸವಾರಿ ಮೆರವಣಿಗೆಯು ನಗರದ ಬಿ.ಜಿ.ಎಸ್. ವೃತ್ತದಿಂದ ಚರ್ಚ್ ಸರ್ಕಲ್, ಡೀಸಿ ಕಚೇರಿ,



ಅಮಾನಿಕೆರೆ ರಸ್ತೆ, ಕೋತಿ ತೋಪು, ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತದ ಮಾರ್ಗವಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನವನ್ನು ತಲುಪಿತು.

ನಂತರ ವಿವಿಧ ಗ್ರಾಮ ದೇವತೆಗಳ ಸಮ್ಮುಖದಲ್ಲಿ ಉಪಮುಖ್ಯಮಂತ್ರಿ ಪರಮೇಶ್ವರ ಅವರು ಕದಳಿ ಛೇದನ ಮಾಡುವ ಮೂಲಕ ಶಮೀ ಪೂಜೆ ಸಂಪನ್ನಗೊಂಡಿತು. ರಾಜ್ಯ ಕಾಡು ಗೊಲ್ಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಮಹೇಶ್, ಶಾಸಕರಾದ ಜಿ.ಬಿ.ಜ್ಯೋತಿಗಣೇಶ್, ಟಿ.ಬಿ. ಜಯಚಂದ್ರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಂದ್ರಶೇಖರಗೌಡ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷ ನಿಕೇತ್‌ರಾಜ್ ಎಂ., ಉಪಮುಖ್ಯಮಂತ್ರಿಗಳ ಧರ್ಮಪತ್ನಿ ಕನ್ನಿಕಾ ಪರಮೇಶ್ವರಿ, ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜಾ, ಪಾಲಿಕೆ ಆಯುಕ್ತೆ ಶುಭ, ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ, ತಹಶೀಲ್ದಾರ್ ರಾಜೇಶ್ವರಿ ಸೇರಿದಂತೆ ವಿವಿಧ ಜನಪ್ರತಿನಿಧಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಪಡಿತರ ಚೀಟಿ ಇ–ಕೈವೈಸಿಗೆ ಮತ್ತೆ ಗಡುವು ವಿಸ್ತರಣೆ: ನವೆಂಬರ್ 10ರವರೆಗೆ ಅವಕಾಶ

ಬೆಂಗಳೂರು: ರಾಜ್ಯದ ಲಕ್ಷಾಂತರ ಪಡಿತರ ಚೀಟಿದಾರರಿಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಕೊನೆಗೂ ದೊಡ್ಡ ರಿಲೀಫ್ ನೀಡಿದೆ. ಆಧಾರ್ ದೃಢೀಕರಣ ಇ–ಕೈವೈಸಿ ಪೂರ್ಣಗೊಳಿಸಲು ನವೆಂಬರ್ 10ರವರೆಗೆ ಗಡುವನ್ನು ವಿಸ್ತರಿಸಿ ಆದೇಶಿಸಿದೆ. ಇದು ಮೂರನೇ ಬಾರಿ ಗಡುವು ವಿಸ್ತರಿಸಿದಂತಾಗಿದೆ. ಬೋಗಸ್ ಪಡಿತರ ಚೀಟಿಗಳನ್ನು ಪತ್ತೆಹಚ್ಚಲು ಮತ್ತು ಪಡಿತರ ಧಾನ್ಯಗಳ ದುರ್ಬಳಕೆ ತಡೆಯಲು ಇಲಾಖೆಯು ಮೊದಲಿಗೆ ಸೆಪ್ಟೆಂಬರ್ 30ರೊಳಗೆ ಇ–ಕೈವೈಸಿ ಕಡ್ಡಾಯಗೊಳಿಸಿತ್ತು. ಆದರೆ ತಾಂತ್ರಿಕ ದೋಷ, ಸರ್ವರ್ ಸಮಸ್ಯೆಯಿಂದ ರಾಜ್ಯದಾದ್ಯಂತ ಜನರು ಪರದಾಡುವಂತಾಯಿತು. ಇದರಿಂದ ಗಡುವನ್ನು ಅಕ್ಟೋಬರ್ 20ರವರೆಗೆ ವಿಸ್ತರಿಸಲಾಗಿತ್ತು.

ಆದರೂ ನ್ಯಾಯಬೆಲೆ ಅಂಗಡಿಗಳ ಮುಂದೆ ಬೆಳಗ್ಗೆಯಿಂದ



ಸಂಜೆಯವರೆಗೆ ಸಾರ್ವಜನಿಕರು ಸರದಿ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ಮುಂದುವರಿದಿತ್ತು. ಕೆಲಸ–ಕಾರ್ಯ ಬಿಟ್ಟು ದಿನವಿಡೀ ಕಾಯುವಂತಾಗಿತ್ತು. ಸಾರ್ವಜನಿಕರ ಆಕ್ರೋಶ, ಜನಪ್ರತಿನಿಧಿಗಳ ಒತ್ತಡದ ಹಿನ್ನೆಲೆಯಲ್ಲಿ ಇದೀಗ ಇಲಾಖೆಯು ನವೆಂಬರ್ 10ರವರೆಗೆ ಮತ್ತೆ ವಿಸ್ತರಣೆ ಮಾಡಿದೆ.

ಮನೆಯಲ್ಲೇ ಇ–ಕೈವೈಸಿ: 'ಅನ್ನಸೇವೆ' ಆಪ್ ಪರಿಹಾರ ಜನದಟ್ಟಣೆ ತಪ್ಪಿಸಲು ಇಲಾಖೆಯು 'ಅನ್ನಸೇವೆ – Annaseve' ಎಂಬ ಹೊಸ ಮೊಬೈಲ್ ಆಪ್ ಬಿಡುಗಡೆ ಮಾಡಿದೆ. ಇನ್ಮುಂದೆ ನ್ಯಾಯಬೆಲೆ ಅಂಗಡಿಗೆ ಹೋಗುವ ಅಗತ್ಯವಿಲ್ಲ. UIDAI ನ Face Authentication (ಮುಖ ಗುರುತಿಸುವಿಕೆ) ತಂತ್ರಜ್ಞಾನ ಮೂಲಕ ಮನೆಯಲ್ಲೇ ಕುಳಿತು ಇ–ಕೈವೈಸಿ ಮಾಡಬಹುದು.

ಇ–ಕೈವೈಸಿಗೆ ಬೇಕಿರುವ 3 ಆಪ್ ಗಳು:

1. CEG Face KYC App
2. AadhaarFaceRD App
3. Annaseve (C£Àß¸ÉÃªÉ) App

ಈ ಮೂರೂ ಆಪ್ ಗಳನ್ನು ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಂಡು, ಆಧಾರ್ ನಂಬರ್ ಹಾಕಿ, ಮುಖದ ಫೋಟೋ ಸ್ಕ್ಯಾನ್ ಮಾಡಿದರೆ ಕೆಲವೇ ನಿಮಿಷಗಳಲ್ಲಿ ಇ–ಕೈವೈಸಿ ಪೂರ್ಣಗೊಳ್ಳುತ್ತದೆ.

ಒಟ್ಟಾರೆ ಸರ್ವರ್ ಸಮಸ್ಯೆಯಿಂದ ಕಂಗೆಟ್ಟಿದ್ದ ಪಡಿತರದಾರರಿಗೆ ಇದು ಸಮಾಧಾನದ ಸುದ್ದಿ. ಕೊನೆಯ ದಿನದವರೆಗೆ ಕಾಯದೆ ಈಗಲೇ ಆಪ್ ಮೂಲಕ ಇ–ಕೈವೈಸಿ ಮಾಡಿಕೊಳ್ಳುವಂತೆ ಇಲಾಖೆ ಮನವಿ ಮಾಡಿದೆ.

ಸಣ್ ಸುದ್ದಿ

ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ : ಮತ ಚಲಾಯಿಸಲು ಗುರುತಿನ ಚೀಟಿ ಕಡ್ಡಾಯ

ತುಮಕೂರು: ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನ ಪರಿಷತ್ತಿನ ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ-2026ರ ಸಂಬಂಧ ಮತದಾನದ ದಿನದಂದು ಮತದಾರರ ಗುರುತಿಗಾಗಿ ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯೊಂದಿಗೆ ಪರ್ಯಾಯ 10 ಗುರುತಿನ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಮೂಲ ಪ್ರತಿಯಲ್ಲಿ ಹಾಜರುಪಡಿಸಿ ಮತ ಚಲಾಯಿಸಲು ಅವಕಾಶ ಕಲ್ಪಿಸಿದೆ.

ಆಧಾರ್ ಕಾರ್ಡ್; ಚಾಲನಾ ಪರವಾನಗಿ; ಪ್ಯಾನ್ ಕಾರ್ಡ್; ಭಾರತೀಯ ಪಾಸ್‌ಪೋರ್ಟ್; ರಾಜ್ಯ/ಕೇಂದ್ರ ಸರ್ಕಾರ, ಸಾರ್ವಜನಿಕ ವಲಯದ ಉದ್ಯಮಗಳು, ಸ್ಥಳೀಯ ಸಂಸ್ಥೆಗಳು ಅಥವಾ ಖಾಸಗಿ ಕೈಗಾರಿಕಾ ಸಂಸ್ಥೆಗಳು ತಮ್ಮ ನೌಕರರಿಗೆ ನೀಡಿರುವ ಸೇವಾ ಗುರುತಿನ ಚೀಟಿ; ಸಂಸದರು/ಶಾಸಕರು/ವಿಧಾನ ಪರಿಷತ್ ಸದಸ್ಯರಿಗೆ ನೀಡಲಾದ ಅಧಿಕೃತ ಗುರುತಿನ ಚೀಟಿ; ಸಂಬಂಧಪಟ್ಟ ಪದವೀಧರರ/ಶಿಕ್ಷಕರ ಕ್ಷೇತ್ರದ ಮತದಾರರು ಉದ್ಯೋಗದಲ್ಲಿರುವ ಶಿಕ್ಷಣ ಸಂಸ್ಥೆಗಳು ನೀಡಿರುವ ಸೇವಾ ಗುರುತಿನ ಚೀಟಿ; ವಿಶ್ವವಿದ್ಯಾನಿಲಯವು ನೀಡಿರುವ ಪದವಿ/ಡಿಪ್ಲೋಮಾ ಪ್ರಮಾಣಪತ್ರ(ಮೂಲ ಪ್ರತಿ); ಸಕ್ಷಮ ಪ್ರಾಧಿಕಾರವು ನೀಡಿರುವ ವಿಕಲಚೇತನ ಪ್ರಮಾಣ ಪತ್ರ(ಮೂಲ ಪ್ರತಿ), ಯುಡಿಐಡಿ ಕಾರ್ಡ್‌ನಲ್ಲಿ ಯಾವುದಾದರೂ ಒಂದನ್ನು ಮೂಲ ಪ್ರತಿಯಲ್ಲಿ ಹಾಜರುಪಡಿಸಿ ಮತ ಚಲಾಯಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಸಾಲ ನೀಡದ ಕಾರಣಕ್ಕೆ

ಟೀ ಅಂಗಡಿ ಧ್ವಂಸಗೊಳಿಸುವುದಾಗಿ ಬೆದರಿಕೆ



ತುಮಕೂರು, : ತುಮಕೂರು ಜಿಲ್ಲೆಯ ಶಿರಾದಲ್ಲಿ, ಸಾಲ ನೀಡದ ಕಾರಣಕ್ಕೆ ಟೀ ಅಂಗಡಿಯೊಂದನ್ನು ಜೆಸಿಬಿಯಿಂದ ಧ್ವಂಸಗೊಳಿಸುವುದಾಗಿ ಬೆದರಿಕೆ ಒಡ್ಡಿದ ಘಟನೆ ನಡೆದಿದೆ. ಬುಧವಾರ ರಾತ್ರಿ ಶಿರಾದ ಕೈಗಾರಿಕಾ ಪ್ರದೇಶದಲ್ಲಿ ಬಿಹಾರ ಮೂಲದ ಯುವಕರ ಗುಂಪೊಂದು ಈ ಅಟ್ಟಹಾಸ ಮೆರೆದಿದೆ. ಚಹಾ ಸಾಲ ನೀಡಲು ಅಂಗಡಿ ಮಾಲೀಕ ನಿರಾಕರಿಸಿದಾಗ, ಗ್ರಾಹಕರೊಂದಿಗೆ ಜಗಳ ಪ್ರಾರಂಭವಾಗಿದೆ. ಈ ಜಗಳ ತಾರಕಕ್ಕೇರಿ, ರೊಚ್ಚಿಗೆದ್ದ ಯುವಕರು ಜೆಸಿಬಿ ತಂದು ಅಂಗಡಿಯನ್ನು ನೆಲಸಮಗೊಳಿಸುವುದಾಗಿ ಬೆದರಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಘಟನೆ ಸ್ಥಳೀಯರಲ್ಲಿ ಆತಂಕ ಮೂಡಿಸಿದ್ದು, ವಿಷಯ ತಿಳಿದ ಕರ್ನಾಟಕ ರಕ್ಷಣಾ ವೇದಿಕೆಯ ಸದಸ್ಯರು ಟೀ ಅಂಗಡಿ ಮಾಲೀಕರ ನೆರವಿಗೆ ಧಾವಿಸಿದ್ದಾರೆ. ನಂತರ ಈ ಸಂಬಂಧ ಶಿರಾನಗರ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಪೊಲೀಸರು ತನಿಖೆಯನ್ನು ಪ್ರಾರಂಭಿಸಿದ್ದು, ಘಟನೆಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಈ ಘಟನೆ ಬಿಹಾರ ಮೂಲದ ಯುವಕರ ದುರ್ವರ್ತನೆ ಮತ್ತು ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಸ್ಥಳೀಯರಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ.

ಇಂದು ಸಚಿ ಆಸ್ಪತ್ರೆಯಲ್ಲಿ ನ್ಯೂರೋಸರ್ಜರಿ ಸಂಬಂಧಿಸಿದ ಕಾಯಿಲೆಗಳಿಗೆ ತಜ್ಞರಿಂದ ಚಿಕಿತ್ಸೆ

ತುಮಕೂರು:ಬೆಂಗಳೂರಿನ ಹೆಸರಾಂತ ಎಂ.ಎಸ್.ರಾಮಯ್ಯ ನರವಿಜ್ಞಾನ ಕ್ಲಿನಿಕ್ ಈಗ ನಗರದ ಶಿರಾರಸ್ತೆಯ ಎಸ್.ಮಾಲ್ ಹತ್ತಿರದ ಸಚಿ ಆಸ್ಪತ್ರೆಯಲ್ಲಿ ಬೆಂಗಳೂರಿನ ಎಂ.ಎಸ್.ರಾಮಯ್ಯ ಮೆಮೋರಿಯಲ್ ಆಸ್ಪತ್ರೆಯ ಪ್ರತಿ ತಿಂಗಳ 2ನೇ ಮತ್ತು 4 ನೇ ಗುರುವಾರ ಅ 22 ರಂದು (ಇಂದು) ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಎಂ.ಎಸ್.ರಾಮಯ್ಯ ಆಸ್ಪತ್ರೆಯ ನ್ಯೂರೋಸರ್ಜರಿ ವೈದ್ಯರಾದ ಡಾ.ರಕ್ಷಿತ್ ಶ್ರೀನಿವಾಸರವರು ಲಭ್ಯವಿರುತ್ತಾರೆ. ನ್ಯೂರೋಸರ್ಜರಿ ಸಂಬಂಧಿಸಿದ ಕಾಯಿಲೆಗಳಾದ ತಲೆನೋವು, ಮೂರ್ಛೆ ರೋಗ, ಕೈಕಾಲುಗಳಲ್ಲಿ ದುರ್ಬಲತೆ, ನಡಿಗೆ ಅಡಚಣೆಗಳು, ಬೆನ್ನು ಮತ್ತು ಕುತ್ತಿಗೆ ನೋವು, ಮರಗಟ್ಟುವಿಕೆ, ಕೈಗಳು ಮತ್ತು ಕಾಲುಗಳ ಪ್ಯಾರೆಸ್ಥೇಷಿಯಾ, ದೃಷ್ಟಿ ಸಮಸ್ಯೆಗಳು, ಸಮತೋಲನ ಸಮಸ್ಯೆ, ತಲೆಸುತ್ತು, ಹಾರ್ಮೋನ್ ಅಸಮತೋಲನ, ನಡಿಗೆ ಅಡಚಣೆಗಳು ಸಮಸ್ಯೆಗೆ ಚಿಕಿತ್ಸೆಯನ್ನು ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ನೋಂದಾಣಿಗಾಗಿ ಟಿ.ಎಸ್.ರಾಜೇಶ್

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಕ್ರೀಡೆಯಿಂದ ದೈಹಿಕವಾಗಿ ಸದೃಢರಾಗಿ



ಸೂರ್ಯಪ್ರಗತಿನ್ಯೂಸ್.ಕಾಂ

ಪಾವಗಡ: ತಾಲ್ಲೂಕಿನ ಕರಿಯಮ್ಮನಪಾಳ್ಯ ಗ್ರಾಮದಲ್ಲಿ ದಸರಾ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಎರಡು ದಿನಗಳ ವಾಲಿಬಾಲ್ ಪಂದ್ಯಾವಳಿಯನ್ನು ವಾಲ್ಮೀಕಿ ಜಾಗೃತಿ ವೇದಿಕೆ ತಾಲ್ಲೂಕು ಅಧ್ಯಕ್ಷ ಲೋಕೇಶ್ ಪಾಳೇಗಾರ್ ಅವರು ಉದ್ಘಾಟಿಸಿ ಮಾತನಾಡಿದರು.

ಯುವಕರು ಇಂದು ಆರೋಗ್ಯ ಮತ್ತು ಮಾನಸಿಕ ಒತ್ತಡದಿಂದ ಮುಕ್ತಿ ಪಡೆಯಲು ಕ್ರೀಡೆ ಅತ್ಯಂತ ಅಮೂಲ್ಯವಾದ ಚಿಕಿತ್ಸೆ ಇದ್ದಂತೆ. ಇಂದಿನ ಕಂಪ್ಯೂಟರ್ ಯುಗದಲ್ಲಿ ತಂತ್ರಜ್ಞಾನ ಬೆಳೆದಂತೆ ಮನುಷ್ಯ ಅತ್ಯಂತ ಮಾನಸಿಕ ಒತ್ತಡಕ್ಕೆ ಬಲಿಯಾಗಿ ಆರೋಗ್ಯ ಕೆಡಿಸಿಕೊಂಡು ಬದುಕುವ ಕಾಲಘಟ್ಟದಲ್ಲಿದ್ದಾನೆ.

ಆದ್ದರಿಂದ ಯುವಕರು, ವಿದ್ಯಾರ್ಥಿಗಳು ತಮ್ಮ ಕೈಲಾದ ಮಟ್ಟಿಗೆ ಕ್ರೀಡೆ, ಕಲೆ, ಸಾಹಿತ್ಯ, ಸಂಗೀತ, ಭಜನೆ, ಕೋಲಾಟ, ಲಾವಣಿ ಪದಗಳು, ರಂಗಭೂಮಿ ಕಲೆಗಳನ್ನು ಮೈಗೂಡಿಸಿಕೊಂಡು ಉತ್ತಮ ಆರೋಗ್ಯವಂತ ಸಮಾಜವನ್ನು ನಿರ್ಮಾಣ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಗ್ರಾಮ ಪಂಚಾಯತ್ ಸದಸ್ಯ ಕೆ.ಎಚ್. ಆಂಜನನಾಯಕ, ತೀರ್ಪುಗಾರರಾದ ಕರಿಯಣ್ಣ, ವೀರೇಂದ್ರ, ರಾಜಗೋಪಾಲ್, ವಕೀಲರಾದ ಮಾರನಾಯಕ, ಮುಖಂಡರಾದ ಕೆ. ಗೋಪಾಲ್, ಓಂಕಾರ ನಾಯಕ, ಕೃಷ್ಣ ಸ್ವಾಮೀಜಿ, ಪವನ್, ಅಂಜಿ, ರಾಜು, ಮೋಹನ್, ನಾಗ ಸಿಂಗಂ, ಶ್ರೀನಾಥ್, ಕೃಷ್ಣಮೂರ್ತಿ, ಪಾಲನಾಯಕ, ಮಹಾಲಿಂಗ ನಾಯಕ, ಆನಂದ ನಾಯಕ, ಧನು, ನಾಗರಾಜ್, ಮಾರುತಿ, ಮಂಜುನಾಥ್, ತಿಮ್ಮರಾಜು ಹಾಗೂ ಗ್ರಾಮಸ್ಥರು, ಕ್ರೀಡಾಪಟುಗಳು ಉಪಸ್ಥಿತರಿದ್ದರು.

ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ವೆಚ್ಚ ವೈದ್ಯರ ಪ್ರಿಸ್ಕ್ರಿಪ್ಷನ್ ಔಷಧ'ಗಳ ದರಪಟ್ಟಿಯನ್ನೂ ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸಿ

ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ವೆಚ್ಚ ಮಾತ್ರವಲ್ಲದೆ ಇನ್ಮುಂದೆ ವೈದ್ಯರ ಪ್ರಿಸ್ಕ್ರಿಪ್ಷನ್ ಇಲ್ಲದೆ ನೀಡಲಾಗದ 'ಶೆಡ್ಯೂಲ್ಡ್ ಔಷಧ'ಗಳ ದರಪಟ್ಟಿಯನ್ನೂ ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸುವುದನ್ನು ಸರ್ಕಾರ ಕಡ್ಡಾಯಗೊಳಿಸಿದೆ. ಆದ್ರೆ, ಇದಕ್ಕೆ ಖಾಸಗಿ ಆಸ್ಪತ್ರೆಗಳು ಆಕ್ಷೇಪ ವ್ಯಕ್ತಪಡಿಸಿವೆ. ಈ ಸಂಬಂಧ ಬೆಂಗಳೂರಿನಲ್ಲಿ ಆರೋಗ್ಯ ಸಚಿವ ಯುಟಿ ಖಾದರ್ ಅವರು ಖಾಸಗಿ ಆಸ್ಪತ್ರೆಗಳ ಜೊತೆ ಸಭೆ ನಡೆಸಿದ್ದು, ರೋಗಿಗಳಿಂದ ಹಣ ವಸೂಲಿ ಮಾಡುತ್ತಿರುವ ಬಗ್ಗೆ ಸಭೆಯಲ್ಲಿ ಪ್ರಶ್ನಿಸಿದ್ದಾರೆ. ಅಲ್ಲದೇ ಕಡ್ಡಾಯವಾಗಿ ಚಿಕಿತ್ಸೆ ಜೊತೆಗೆ ಔಷಧ ದರಪಟ್ಟಿ ಬೋರ್ಡ್ ಹಾಕಬೇಕೆಂದು ತಾಕೀತು ಮಾಡಿದರು. ಆದ್ರೆ, ಇದಕ್ಕೆ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳ ಸಂಘಟನೆ (PHANA – ಫನಾ) 6 ತಿಂಗಳು ಸಮಯವಕಾಶ ಕೇಳಿದೆ.

6 ತಿಂಗಳು ಸಮಯ ಕೇಳಿದ ಖಾಸಗಿ ಆಸ್ಪತ್ರೆಗಳ ಒಕ್ಕೂಟ ಬೆಂಗಳೂರಿನ ಆರೋಗ್ಯ ಸೌಧದಲ್ಲಿ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳ ಸಂಘಟನೆ (ಫನಾ) ಪದಾಧಿಕಾರಿಗಳೊಂದಿಗೆ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಮಹತ್ವದ ಸಭೆ ನಡೆಸಿದ ಆರೋಗ್ಯ ಸಚಿವ ಯು.ಟಿ. ಖಾದರ್, ಆಸ್ಪತ್ರೆಗಳ ಸುಲಿಗೆ ಪ್ರವೃತ್ತಿ ಮತ್ತು ಅತಿಯಾದ ದರ ವಸೂಲಿ ವಿರುದ್ಧ ತೀವ್ರ ಅಸಮಾಧಾನ ಹೊರಹಾಕಿದ್ದಾರೆ. ಅಲ್ಲದೇ ಎಲ್ಲಾ ದರವನ್ನೂ ಪ್ರದರ್ಶನ ಮಾಡಬೇಕೆಂದು ಖಡಕ್ ಆಗಿ ಹೇಳಿದ್ದಾರೆ. ಆದ್ರೆ, ಇದಕ್ಕೆ ಫನಾ ವಿರೋಧ ವ್ಯಕ್ತಪಡಿಸಿದ್ದು, ಏಕಾಏಕಿ ದರ ಪಟ್ಟಿ ಹಾಕುವಂತೆ ಹೇಳಿದ್ರೆ ಏನು ಮಾಡುವುದು. ಸದ್ಯಕ್ಕೆ ಆಗುವುದಿಲ್ಲ. ಕನಿಷ್ಠ ಆರು ತಿಂಗಳು ಸಮಯ ಬೇಕು ಎಂದಿವೆ. ಈ ಮನವಿಯನ್ನು ಖಾದರ್ ನೇರವಾಗಿ ನಿರಾಕರಿಸಿದ್ದಾರೆ. "ಆರು ತಿಂಗಳು ಕಾಲಾವಕಾಶ ನೀಡಲು ಸಾಧ್ಯವಿಲ್ಲ. ಅಧಿಕಾರಿಗಳೊಂದಿಗೆ ಚರ್ಚಿಸಿ ಎಷ್ಟು ಸಮಯಾವಕಾಶ ನೀಡಬೇಕೆಂದು ತೀರ್ಮಾನಿಸುತ್ತೇನೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಏಕರೂಪದ ಚಿಕಿತ್ಸಾ ದರ ನಿಗದಿಗೆ ಖಾಸಗಿ



ಆಸ್ಪತ್ರೆಗಳ ಒಕ್ಕೂಟ ವಿರೋಧ ವ್ಯಕ್ತಪಡಿಸಿದ್ದು, ಏಕರೂಪದ ಚಿಕಿತ್ಸೆಗೆ ಏನಿದೆ ಮಾನದಂಡ ? ಯಾವ ಮಾನದಂಡದ ಮೇಲೆ ಚಿಕಿತ್ಸಾ ದರ ನಿಗದಿ ಮಾಡುತ್ತೀರಾ? ಔಷಧದ ಖರೀದಿ ಬೆಲೆ ಎಷ್ಟು? ರೋಗಿಗೆ ವಿಧಿಸಿದ ಬೆಲೆ ಎಷ್ಟು? ಎಂದು ಮಾಹಿತಿ ನೀಡಲು ಕಷ್ಟ. ಕೆಲವೊಮ್ಮೆ ಬಲ್ಕ್ ನಲ್ಲಿ ಔಷಧ ಖರೀದಿ ಮಾಡುತ್ತೇವೆ. ಇನ್ನು ಕೆಲವು ಸರಿ ಲಾಟ್‌ಗಳಲ್ಲಿ ಬುಕ್ ಮಾಡುತ್ತೇವೆ. ಒಂದೊಂದಕ್ಕೆ ಒಂದೊಂದು ದರ ಅಳವಡಿಸಲು ಕಷ್ಟವಾಗುತ್ತೆ ಎಂದಿದೆ.

ಇನ್ನು ಸಭೆ ಬಳಿಕ ಮಾತನಾಡಿದ ಆರೋಗ್ಯ ಸಚಿವ ಯುಟಿ ಖಾದರ್, ಬಿಲ್ ಕಡಿಮೆ ಮಾಡುವುದು ಸೇರಿದಂತೆ ಅನೇಕ ವಿಚಾರ ಚರ್ಚೆಯಾಗಿದ್ದು, ಸಭೆಯಲ್ಲಿ ಖಾಸಗಿ ಆಸ್ಪತ್ರೆಯವರು ಸಮಸ್ಯೆ ಹೇಳಿಕೊಂಡಿದ್ದಾರೆ. ಏನೇ ಆದರೂ ಜನರಿಗೆ ಮೋಸವಾಗಬಾರದು. ಜನರ ಸಹನೆ ಕೈಮೀರಿ ಹೋಗುವ ಪರಿಸ್ಥಿತಿ ಸೃಷ್ಟಿಯಾಗಬಾರದು. ಕ್ಯಾನ್ಸರ್ ಔಷಧ ದರ ಮಾತ್ರ ಯಾಕೆ ಕಡಿಮೆ ಮಾಡಿದ್ರಿ ಎಂದು ನ್ಯಾಯಾಲಯ ಕೇಳಿದೆ. ಹೀಗಾಗಿ ಕಿಡ್ನಿ, ಹೃದಯದ ಔಷಧ ದರ ಕಡಿಮೆ ಮಾಡುವಂತೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ದರ ಪಟ್ಟಿ ಪ್ರದರ್ಶನ, ಏಕರೂಪ ಚಿಕಿತ್ಸಾ ದರದ ವಿಚಾರದಲ್ಲಿ ಖಾಸಗಿ ಆಸ್ಪತ್ರೆಗಳು ಸಮಯವಕಾಶ ಕೇಳಿವೆ. ಏಕಾಏಕಿ ದರ ಪಟ್ಟಿ ಪ್ರದರ್ಶಿಸಲು ಸಾಧ್ಯವಿಲ್ಲ. ನಮಗೆ ಕಂಪ್ಯೂಟರ್ ಅಪ್‌ಡೇಟ್ ಮಾಡಬೇಕು, ಇದಕ್ಕೆ ಕನಿಷ್ಠ 6 ತಿಂಗಳು ಬೇಕು ಎಂದಿವೆ. ನಾವು ಎಷ್ಟು ಸಮಯ ಕೊಡಬಹುದು ಎಂದು ಯೋಚಿಸಿ ತಿಳಿಸುತ್ತೇವೆ ಎಂದು ಹೇಳಿದರು.

ವಿಮೆ ಕಂಪನಿಗಳಿಗೂ ಮೂಗುದಾರ

ಆಸ್ಪತ್ರೆಗಳು ಮತ್ತು ವಿಮಾ ಕಂಪನಿಗಳ ನಡುವಿನ ವ್ಯವಹಾರಗಳ ಬಗ್ಗೆಯೂ ಮಾತನಾಡಿದ ಖಾದರ್, ಒಂದು ಲಕ್ಷ ರೂಪಾಯಿ ಆಗುವ ಸರ್ಜರಿಗೆ ಮೂರು ಲಕ್ಷ ರೂಪಾಯಿ ಬಿಲ್ ಕಳುಹಿಸಲಾಗುತ್ತದೆ. ಅಂತಿಮವಾಗಿ 50 ಸಾವಿರ ರೂಪಾಯಿಯನ್ನು ರೋಗಿಯ ಕಡೆಯವರೇ ಭರಿಸಬೇಕೆಂದು ಹೇಳುತ್ತಾರೆ. ವಿಮಾ ಕಂಪನಿಗಳು ಎಲ್ಲೋ ದೂರದಲ್ಲಿ ಕುಳಿತು ಸರಿಯಾಗಿ ಸ್ಪಂದಿಸುವುದಿಲ್ಲ. ಈ ಅನ್ಯಾಯವನ್ನು ಯಾರಲ್ಲಿ ಕೇಳುವುದು? ಹಾಗಾಗಿ ಶೀಘ್ರದಲ್ಲೇ ಇನ್ಶೂರೆನ್ಸ್ ಕಂಪನಿಗಳ ಜೊತೆಗೂ ಪ್ರತ್ಯೇಕ ಸಭೆ ನಡೆಸಿ ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸಲಾಗುವುದು ಎಂದು ಎಚ್ಚರಿಕೆ ನೀಡಿದರು

ವಿದೇಶಿ ಫಂಡಿಂಗ್ ಆಕ್ಷೇಪ

ವೈದ್ಯಕೀಯ ಕ್ಷೇತ್ರದ ಕಾರ್ಪೊರೇಟೀಕರಣದ ಬಗ್ಗೆ ಕಳವಳ ವ್ಯಕ್ತಪಡಿಸಿದ ಸಚಿವರು, ವೈದ್ಯರೇ ಆಸ್ಪತ್ರೆಗಳನ್ನು ಮುನ್ನಡೆಸಿದಾಗ ಹೆಚ್ಚಿನ ಸಮಸ್ಯೆಯಾಗುವುದಿಲ್ಲ. ಆದರೆ ವಿದೇಶಿ ಕಂಪನಿಗಳು ದೊಡ್ಡ ಮಟ್ಟದ ಹಣ ಹೂಡಿಕೆ (ಫಂಡಿಂಗ್) ಮಾಡಿ ಲಾಭ ಗಳಿಕೆಯನ್ನೇ ಮುಖ್ಯ ಗುರಿಯಾಗಿಸಿಕೊಂಡಿವೆ. ವೈದ್ಯರಿಗೆ ಟಾರ್ಗೆಟ್ ನೀಡಿ ಚಿಕಿತ್ಸಾ ದರವನ್ನು ವಿಪರೀತ ಹೆಚ್ಚಿಸುತ್ತಿರುವುದು ಸರಿಯಲ್ಲ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸಾ ದರಗಳು ಗಗನಕ್ಕೇರಿವೆ. ಇವರು ಆರೋಗ್ಯ ಸೇವೆಯನ್ನು ಕೇವಲ ಬ್ಯುಸಿನೆಸ್ ಮಾಡಿಕೊಂಡಿದ್ದಾರೆಯೇ? ಆಸ್ಪತ್ರೆಗಳಿಗೆ ನಷ್ಟವಾಗಬಾರದು ನಿಜ, ಆದರೆ ಅದೇ ನೆಪದಲ್ಲಿ ಜನರ ಜೇಬು ಲೂಟಿ ಮಾಡುವುದನ್ನು ಸಹಿಸಲು ಸಾಧ್ಯವಿಲ್ಲ. ಚಿಕಿತ್ಸಾ ದರಪಟ್ಟಿಯನ್ನು ಪ್ರದರ್ಶಿಸಲು ಇವರಿಗೆ ಇರುವ ತೊಂದರೆಯಾದರೂ ಏನು? ಔಷಧಿಗಳಿಗೆ ದುಪ್ಪಟ್ಟು ದರ ವಸೂಲಿ ಮಾಡುವುದು, ಕಮಿಷನ್ ದಂಧೆ, ವೈದ್ಯರಿಗೆ ಟೂರ್ ಆಯೋಜಿಸುವುದು ಹಾಗೂ ಕೇವಲ ಅತಿಯಾದ ಲಾಭ ತರುವ ಔಷಧಿಗಳನ್ನು ಮಾತ್ರ ಮಾರಾಟ ಮಾಡುವ ಪ್ರವೃತ್ತಿ ಹೆಚ್ಚಾಗಿದೆ. ಮಧ್ಯವರ್ತಿಗಳ ಹಾವಳಿಯೂ ಮಿತಿಮೀರಿದೆ. ಇಂತಹ ದಂಧೆಗಳಿಗೆಲ್ಲಾ ಸರ್ಕಾರ ಶೀಘ್ರವೇ ಕಡಿವಾಣ ಹಾಕಲಿದೆ ಎಂದರು.



ಚಂದನ್‌ಶೆಟ್ಟಿ ಹಾಡಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದ ಡಿಸಿಎಂ

"ಮೀಟ್ ಮಾಡಾನ ಇಲ್ಲ ಡೇಟ್ ಮಾಡನಾ" ಖ್ಯಾತ ನಟಿ ಡಿಂಪಲ್ ಕ್ವೀನ್ ರಚಿತಾರಾಮ್ ಸ್ಟೆಪ್

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಕನ್ನಡದ ರ್‍ಯಾಪರ್ ಚಂದನ್‌ಶೆಟ್ಟಿ ಹಾಡಿಗೆ ಉಪಮುಖ್ಯಮಂತ್ರಿ ಡಾ: ಜಿ. ಪರಮೇಶ್ವರ ಅವರು ಹೆಜ್ಜೆ ಹಾಕಿ ಸಂಭ್ರಮಿಸಿದರು.

ನಗರದ ಸರ್ಕಾರಿ ಜ್ಯೂನಿಯರ್ ಕಾಲೇಜು ಮೈದಾನದಲ್ಲಿ ದಸರಾ ಉತ್ಸವದ 9ನೇ ದಿನವಾದ ಸೋಮವಾರ ಅಮರಶಿಲ್ಪಿ ಚಕಣಾಚಾರಿ ಸಾಂಸ್ಕೃತಿಕ ವೈಭವ ಮಹಾವೇದಿಕೆಯಲ್ಲಿ ಸಂಜೆ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು ಚಂದನ್‌ಶೆಟ್ಟಿ ಅವರ ರ್‍ಯಾಪ್ ಸಾಂಗಿಗೆ ಸ್ಟೆಪ್ ಹಾಕಿ ಎಲ್ಲರ ಗಮನ ಸೆಳೆದರು.

ಚಂದನ್‌ಶೆಟ್ಟಿ ಜೊತೆಯಾಗಿ ರ್‍ಯಾಂಪ್ ವಾಕ್ ಮಾಡಿ ಪ್ರೇಕ್ಷಕರತ್ತ ಕೈಬೀಸಿ ಶುಭ ಕೋರಿದರು. ಪ್ರೇಕ್ಷಕರು ಪರಮೇಶ್ವರ್ ಅವರ ಭಾವಚಿತ್ರವನ್ನು ಪ್ರದರ್ಶಿಸಿ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು.

ಚಂದನ್‌ಶೆಟ್ಟಿ ಅವರ "ಪೊಗರು ಅಣ್ಣನಿಗೆ ಪೊಗರು", "ಕರಾಬು ಬಾಸು ಕರಾಬು", ಕೋಲು ಮಂಡೆ ಜಂಗುಮ ದೇವ" ಹಾಡುಗಳ ಲಯಕ್ಕೆ ತಕ್ಕಂತೆ ಹುಡುಗರು ಕುಣಿದು





ಕುಪ್ಪಳಿಸಿದರು. ಇದಕ್ಕೂ ಮುನ್ನ ವೀಣಾವಿದ್ಯಾಮೂರ್ತಿ ಮತ್ತು ತಂಡದವರಿಂದ "ದೇವಿ ಶಕ್ತಿ" ಪ್ರದರ್ಶನ ನೆರೆ ದಿದ್ದವರನ್ನು ಭಕ್ತಿಭಾವ ಲೋಕಕ್ಕೆ ಕರೆದೊಯ್ಯಿತು.

ಹಿರಿಯರನ್ನು ಗೌರವಿಸಿ-ರಚ್ಚು ಕಿವಿ ಮಾತು :

ನಂತರ ದಸರಾ ಉತ್ಸವಕ್ಕೆ ಆಗಮಿಸಿದ್ದ ಕನ್ನಡದ ಖ್ಯಾತ ನಟಿ ಡಿಂಪಲ್ ಕ್ವೀನ್ ರಚಿತಾರಾಮ್ ಅವರು ಡಿಸಿಎಂ ಪರಮೇಶ್ವರ್ ಹಾಗೂ ಕನ್ನಿಕಾಪರಮೇಶ್ವರಿ ದಂಪತಿಯನ್ನು ಕೈ ಹಿಡಿದು ವೇದಿಕೆಗೆ ಕರೆ ತಂದು ಮಾತನಾಡುತ್ತಾ, ಮೊದಲ ಬಾರಿ ತುಮಕೂರು ದಸರಾ ಉತ್ಸವಕ್ಕೆ ಬಂದಿದ್ದೇನೆ. ಇಲ್ಲಿನ ಸಂಭ್ರಮ ನೋಡಿ ನನಗೆ ಬಹಳ ಖುಷಿಯಾಗುತ್ತಿದೆ ಎಂದು ತಮ್ಮ ಸಂತಸವನ್ನು ಹಂಚಿಕೊಂಡರು.

ದೇವಿಯು ತುಮಕೂರಿನ ಜನತೆಗೆ ಉತ್ತಮ ಆರೋಗ್ಯ, ನೆಮ್ಮದಿ ನೀಡಲಿ. ನಾವೆಲ್ಲಾ ಪರರಿಗೆ ಒಳಿತನ್ನೇ ಬಯಸೋಣ, ಹಿರಿಯರನ್ನು ಗೌರವಿಸೋಣ, ಹೆತ್ತವರನ್ನು ನೋಯಿಸದೆ ಚಾಮುಂಡೇಶ್ವರಿ ದೇವಿಯ ಕೃಪೆಗೆ ಪಾತ್ರರಾಗೋಣ ಎಂದು ತಿಳಿಸಿದ ಅವರು, ತಂದೆ-ತಾಯಿಯರು ಹೆಮ್ಮೆ ಪಡುವಂತೆ ಮಕ್ಕಳು ತಮ್ಮ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಏಕ್ ಲವ್ ಯಾ ಚಲನಚಿತ್ರದ "ಮೀಟ್ ಮಾಡಾನ ಇಲ್ಲ ಡೇಟ್ ಮಾಡನಾ", ರನ್ನ ಚಲನಚಿತ್ರದ "ತಿತಲಿ-ತಿತಲಿ" ಹಾಡಿಗೆ ಹೆಜ್ಜೆ ಹಾಕಿದ ರಚ್ಚು ಡ್ಯಾನ್ಸಿಗೆ ಅಭಿಮಾನಿಗಳೂ



ಸಹ ನಿಂತಲ್ಲೇ ಕುಣಿದು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜ, ಮತ್ತಿತರರು ಉಪಸ್ಥಿತರಿದ್ದರು.



ಅಂತರಂಗದ ಶತ್ರು ನಾಶಕ್ಕೆ ಜ್ಞಾನವೇ ಆಯುಧ: ಮಲಯಶಾಂತಮುನಿ ಶ್ರೀ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಭಾರತೀಯ ಸಂಸ್ಕೃತಿ ವಿಶ್ವದಲ್ಲೇ ವಿಶೇಷವಾದದ್ದು. ಹಲವು ಜಾತಿ-ಧರ್ಮ, ಹಲವು ಭಾಷೆ, ಹಲವು ಸಂಸ್ಕೃತಿ ಒಳಗೊಂಡ ಭಾರತದಲ್ಲಿಐಕ್ಯತೆ ಮೂಡಿಸುವುದು ಕಷ್ಟದ ಕೆಲಸ ಆದರೆ, ಕುವೆಂಪು ಹೇಳಿದಂತೆ ಸರ್ವಜನಾಂಗದ ಶಾಂತಿಯ ತೋಟದಂತೆ ನಾವು ಏಕತೆಯ ಪ್ರವೃತ್ತಿ ಬೆಳೆಸಿಕೊಂಡಾಗ ಸಾಧ್ಯವಾಗುತ್ತದೆ ಎಂದು ಶಿವಗಂಗಾ ಕ್ಷೇತ್ರದ ಮೇಲಣಗವಿ ಸಂಸ್ಥಾನ ಮಠದಡಾ. ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತುಮಕೂರು ನಗರ ವೀರಶೈವ ಸಮಾಜ ಸೇವಾ ಸಮಿತಿಯಿಂದದಸರಾ ಮಹೋತ್ಸವದ ಅಂಗವಾಗಿ ಬುಧವಾರ ನಗರದರೇಣುಕಾ ವಿದ್ಯಾಪೀಠ ಆವರಣದ ಮಹಾನವಿ ಮಂಟಪದಲ್ಲಿ ಹಮ್ಮಿಕೊಂಡಿದ್ದ ವಿಜಯ ದಶಮಿಯ ಶಮಿ ಪೂಜೆ ಸಮಾರಂಭದ ಸಾನಿಧ್ಯ



ವಹಿಸಿ ಮಾತನಾಡಿದ ಸ್ವಾಮೀಜಿ, ವೈಯಕ್ತಿಕ ಪ್ರತಿಷ್ಠೆ ದೂರವಿರಿಸಿ ಸಮಾಜಕ್ಕೆ ಸಂಪೂರ್ಣ ತೊಡಗಿಸಿಕೊಂಡರೆ ಐಕ್ಯತೆಕಾಪಾಡಲು ಸಾಧ್ಯವಾಗುತ್ತದೆಎಂದರು.

ವಿಜಯನಗರ ಅರಸರ ಕಾಲದಲ್ಲಿತುಂಗಾನದಿ ದಡದಲ್ಲಿ ಆರಂಭವಾದ ದಸರಾ ಉತ್ಸವ ನಂತರ ಮೈಸೂರು ಅರಸರಕಾಲದಲ್ಲಿ ಕಾವೇರಿ ನದಿ ತೀರಕ್ಕೆ ಸ್ಥಳಾಂತರಗೊಂಡು ಅಂದಿನಿಂದ ಇಂದಿನವರೆಗೂ ದಸರಾವನ್ನು ನಾಡಹಬ್ಬವನ್ನಾಗಿ ಆಚರಿಸುತ್ತಿದ್ದೇವೆ, ಈ ಹಬ್ಬದ ಆಯುಧ ಪೂಜೆಗೆ ಹಿನ್ನೆಲೆ ಇದೆ. ರಾಜ್ಯ ಸಂರಕ್ಷಣೆಗೆ ಶತ್ರುಗಳನ್ನು ಕೊಲ್ಲಲು ಆಗಿನ ಮಹಾರಾಜರು ಆಯುಧ ಬಳಸುತ್ತಿದ್ದರು. ಈಗ ನಾವು ನಮ್ಮ ಅಂತರಂಗದ ಶತ್ರುಗಳನ್ನು ನಾಶ ಮಾಡಲು ಜ್ಞಾನವೆಂಬ ಆಯುಧ ಬಳಸಬೇಕು.ಅಂತರಂಗದ ಕೋಪ, ದ್ವೇಷ, ಮದ-ಮತ್ಸರ, ಅಸೂಯೆ ಗುಣಗಳ ಶತ್ರುಗಳ ಹರಣ ಮಾಡಬೇಕು.ಜಗತ್ತಿನ ಸಾಧಕರು ಶತ್ರುಗಳ ಮೇಲೆ ಸಮರ ಸಾರಿ ಸಾಧನೆ ಮಾಡಿಲ್ಲ, ಮಹಾತ್ಮರು, ಸಂತರು, ಶರಣರುತಮ್ಮಜ್ಞಾನದ ಮೂಲಕ ಅಂತರಂಗದ ಶತ್ರುಗಳನ್ನು ನಾಶ ಮಾಡಿ ಸಾಧನೆ ಮಾಡಿದ್ದಾರೆಎಂದುಡಾ. ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರ ವೀರಶೈವ ಸಮಾಜ ಸೇವಾ ಸಮಿತಿಅಧ್ಯಕ್ಷಕೋರಿ ಮಂಜುನಾಥ್ ಮಾತನಾಡಿ, ರಾಜ್ಯ, ದೇಶ, ಜನರು ಸುಖ, ಸೌಖ್ಯದಿಂದ ಬಾಳಬೇಕು ಎನ್ನುವಕಾರಣಕ್ಕೆ ಶಮಿ ಪೂಜೆ ಮಾಡಲಾಗುತ್ತದೆ.ಈಗ ಎಲ್ಲೆಡೆಅಕ್ರಮ, ದೌರ್ಜನ್ಯ, ಕ್ರೌರ್ಯ ಹೆಚ್ಚಾಗುತ್ತಿದೆ. ಧರ್ಮಾಚರಣೆಯಲ್ಲಿ ರಾಜಕೀಯ ಬೆರೆತರೆ ನಾಗರೀಕ ಸಮಾಜ ದುಸ್ಥಿತಿಗೆ ಹೋಗುತ್ತದೆಎಂದರು.

ಮಠ, ದೇವಸ್ಥಾನ ಸೇರಿದಂತೆಧಾರ್ಮಿಕಕೇಂದ್ರ, ಧರ್ಮದ ಮೇಲೆ ಆಘಾತಕಾರಿ ಪ್ರಯತ್ನಗಳಾದಾಗ ಎಲ್ಲರೂಜಾತಿ ಮೀರಿಒಂದಾಗಬೇಕು.ಧರ್ಮವನ್ನು ಗೌರವಿಸಿ ಬೆಲೆ ಕೊಡಬೇಕುಎಂದಕೋರಿ ಮಂಜುನಾಥ್, ವೀರಶೈವಸಮಾಜದಿಂದ ಪ್ರತಿವರ್ಷ ಶಮಿ ಪೂಜೆ ಆಚರಿಸಿಕೊಂಡು ಬರಲಾಗುತ್ತಿದೆ.ಸಮಾಜದಎಲ್ಲಾ ದೇವರುಗಳನ್ನು ಉತ್ಸವದ ಮೂಲಕ ಕರೆತಂದುಒಂದೆಡೆ ಸೇರಿಸುವ ವಿಶೇಷ ಆಚರಣೆಯೂಇದಾಗಿದೆಎಂದು ಹೇಳಿದರು.

"ಕಾನೂನು ಶಿಕ್ಷಣವು ಕೇವಲ ಪದವಿ ಪಡೆಯುವುದಕ್ಕೆ ಸೀಮಿತವಾಗದೆ ಮೌಲ್ಯಗಳನ್ನು ಎತ್ತಿಹಿಡಿಬೇಕು.

ತುಮಕೂರು: ನಗರದ ಮೇಳೇಕೋಟೆ ಮುಖ್ಯ ರಸ್ತೆಯಲ್ಲಿರುವ ಕೇಂಬ್ರಿಡ್ಜ್ ಕಾನೂನು ಕಾಲೇಜಿನಲ್ಲಿ ಪ್ರಥಮ ಬಾರಿಗೆ ಕಾನೂನು ಪದವಿ ತರಗತಿಗಳ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಯಿತು. ಈ ಮೂಲಕ ಸಂಸ್ಥೆಯು ಕಾನೂನು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಹೆಜ್ಜೆಯನ್ನಿಟ್ಟಿದೆ.

ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ಗುರುರಾಘವೇಂದ್ರ ಎಜುಕೇಶನಲ್ ಟ್ರಸ್ಟ್ ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಶ್ರೀಮತಿ ಅನುಪಾ ಪುನೀತ್ ಮಾತನಾಡಿ, "ಕಾನೂನು ಶಿಕ್ಷಣವು ಕೇವಲ ಪದವಿ ಪಡೆಯುವುದಕ್ಕೆ ಸೀಮಿತವಾಗದೆ, ಸಮಾಜದಲ್ಲಿ ನ್ಯಾಯ, ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಜವಾಬ್ದಾರಿಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ವಿದ್ಯಾರ್ಥಿಗಳಿಗೆ



ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ಶೈಕ್ಷಣಿಕ ವಾತಾವರಣವನ್ನು ಒದಗಿಸುವುದು ನಮ್ಮ ಸಂಸ್ಥೆಯ ಉದ್ದೇಶವಾಗಿದೆ. ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಸಮಾಜಕ್ಕೆ ಉತ್ತಮ ಕೊಡುಗೆ ನೀಡುವ ಪ್ರಜ್ಞಾವಂತ ನಾಗರಿಕರಾಗಿ ರೂಪುಗೊಳ್ಳಬೇಕು" ಎಂದು ತಿಳಿಸಿದರು.

ಶ್ರೀ ಗುರುರಾಘವೇಂದ್ರ ಎಜುಕೇಶನಲ್ ಟ್ರಸ್ಟ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪುನೀತ್ ಟಿ ಎಂ ಮಾತನಾಡಿ, "ಕೇಂಬ್ರಿಡ್ಜ್ ಸಂಸ್ಥೆಯು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ ಕಾನೂನು ಪದವಿ ತರಗತಿಗಳನ್ನು ಆರಂಭಿಸಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕಾನೂನು ಜ್ಞಾನಕ್ಕೆ ಹೆಚ್ಚಿನ ಮಹತ್ವವಿದೆ. ವಿದ್ಯಾರ್ಥಿಗಳು ಶೈಕ್ಷಣಿಕ ಜ್ಞಾನದ ಜೊತೆಗೆ ವೃತ್ತಿಪರ ಕೌಶಲ್ಯ, ಶಿಸ್ತು, ಸಂವಹನ ಸಾಮರ್ಥ್ಯ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸಿಕೊಳ್ಳಬೇಕು. ಭವಿಷ್ಯದಲ್ಲಿ ಸಮರ್ಥ ಕಾನೂನು ತಜ್ಞರಾಗಿ ಬೆಳೆಯಲು ಸಂಸ್ಥೆಯು ಅಗತ್ಯ ಶೈಕ್ಷಣಿಕ ಮಾರ್ಗದರ್ಶನ ನೀಡಲಿದೆ" ಎಂದು ಹೇಳಿದರು.

ಕೇಂಬ್ರಿಡ್ಜ್ ಇನ್ಸ್ಟಿಟ್ಯೂಟ್ ಡೀನ್ ಕೆ ಪೃಥ್ವಿರಾಜ್ ಚೌಹಾಣ್ ಮಾತನಾಡಿ, "ಕಾನೂನು ಶಿಕ್ಷಣವು ಸಂವಿಧಾನದ ಆಶಯಗಳು, ನಾಗರಿಕರ ಹಕ್ಕುಗಳು ಮತ್ತು ಕರ್ತವ್ಯಗಳ ಅರಿವನ್ನು ಮೂಡಿಸುವ ಪ್ರಮುಖ ಕ್ಷೇತ್ರವಾಗಿದೆ. ವಿದ್ಯಾರ್ಥಿಗಳು ಕಾನೂನಿನ ವಿವಿಧ ಆಯಾಮಗಳನ್ನು ಆಳವಾಗಿ ಅಧ್ಯಯನ ಮಾಡುವುದರ ಜೊತೆಗೆ ವಿಶ್ಲೇಷಣಾತ್ಮಕ ಚಿಂತನೆ, ವಾದ ಮಂಡನೆ ಹಾಗೂ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಈ ಹೊಸ ಶೈಕ್ಷಣಿಕ ಪ್ರಯತ್ನವು ವಿದ್ಯಾರ್ಥಿಗಳಿಗೆ ಕಾನೂನು ಕ್ಷೇತ್ರದಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗಲಿದೆ" ಎಂದು ಅಭಿಪ್ರಾಯಪಟ್ಟರು.

ನವೆಂಬರ್ 14-15ರಂದು ಭಾರತದ ಅತಿದೊಡ್ಡ ಟ್ರೇಡಿಂಗ್ ಕಾರ್ಡ್ ಗೇಮ್ ಗ್ಯಾದರಿಂಗ್

ಸೂರ್ಯಪ್ರಗತಿನ್ಯೂಸ್.ಕಾಂ

ನವೆಂಬರ್ 14-15, 2026 ರಂದು ಬೆಂಗಳೂರಿನಲ್ಲಿ ಭಾರತದ ಅತಿದೊಡ್ಡ ಟ್ರೇಡಿಂಗ್ ಕಾರ್ಡ್ ಗೇಮ್ ಗ್ಯಾದರಿಂಗ್ ಅನ್ನು ತರಲು ಬೆಂಗಳೂರು ಕಾರ್ಡ್ ಶೋ 2.0 ಸಜ್ಜಾಗಿದೆ 1,200 ಕ್ಕೂ ಹೆಚ್ಚು ಪ್ರೇಕ್ಷಕರೊಂದಿಗೆ ಯಶಸ್ವಿ ಚೊಚ್ಚಲ ಪ್ರವೇಶದ ನಂತರ, ಎರಡು ದಿನಗಳ ಈವೆಂಟ್ ಬೆಂಗಳೂರಿನ ಶುಭ್ ಕನ್ವೆನ್ಷನ್ ಸೆಂಟರ್‌ನಲ್ಲಿ ಸಂಗ್ರಹಕಾರರು, ಆಟಗಾರರು ಮತ್ತು ಉತ್ಸಾಹಿಗಳನ್ನು ಒಟ್ಟುಗೂಡಿಸುತ್ತದೆ.

ಬೆಂಗಳೂರು, ಕರ್ನಾಟಕ, ಭಾರತ, ಅಕ್ಟೋಬರ್ 2026: ಭಾರತದ ಅತಿದೊಡ್ಡ ಟ್ರೇಡಿಂಗ್ ಕಾರ್ಡ್ ಗೇಮ್ (ಖಿಅಉ) ಗ್ಯಾದರಿಂಗ್ ಎಂದು ಸ್ಥಾನ ಪಡೆದಿರುವ ಬೆಂಗಳೂರು ಕಾರ್ಡ್ ಶೋ (ಃಅಖ), ನವೆಂಬರ್ 14 ಮತ್ತು 15, 2026 ರಂದು ಬೆಂಗಳೂರಿನ ಶುಭ್ ಕನ್ವೆನ್ಷನ್ ಸೆಂಟರ್‌ನಲ್ಲಿ ತನ್ನ ಎರಡನೇ ಆವೃತ್ತಿಗೆ ಮರಳಲಿದೆ. ಎಮರಾಲ್ಡ್ ಕಾರ್ಡ್ ಕಲೆಕ್ಟಿವ್ ಪ್ರೈ. ಲಿಮಿಟೆಡ್ ಆಯೋಜಿಸಿರುವ ಃಅಖ 2.0 ಭಾರತದ ಬೆಳೆಯುತ್ತಿರುವ ಟ್ರೇಡಿಂಗ್ ಕಾರ್ಡ್ ಆಟಗಳು (ಖಿಅಉ) ಮತ್ತು ಸಂಗ್ರಹಯೋಗ್ಯ ಸಮುದಾಯವನ್ನು ಎರಡು ದಿನಗಳ ಸಂಗ್ರಹಣೆ, ವ್ಯಾಪಾರ, ಪಂದ್ಯಾವಳಿಗಳು



ಮತ್ತು ಸಮುದಾಯ ಅನುಭವಗಳಿಗಾಗಿ ಒಟ್ಟುಗೂಡಿಸುತ್ತದೆ.

ಬೆಂಗಳೂರು ಮೂಲದ ಸಂಗ್ರಾಹಕರಾದ ಸಾಗರ್ ಎಸ್ ಮತ್ತು ರಯಾನ್ ಸತೀಶ್ ಸ್ಥಾಪಿಸಿದ ಬೆಂಗಳೂರು ಕಾರ್ಡ್ ಶೋ, ಜಾಗತಿಕ ಕಾರ್ಡ್-ಶೋ ಅನುಭವವನ್ನು ಭಾರತಕ್ಕೆ ತರಲು ರಚಿಸಲಾಗಿದೆ. ಜೂನ್ 2026 ರಲ್ಲಿ 1,200 ಕ್ಕೂ ಹೆಚ್ಚು ಜನರನ್ನು ಸ್ವಾಗತಿಸಿದ ಉದ್ಘಾಟನಾ ಆವೃತ್ತಿಯ ಯಶಸ್ಸಿನ ನಂತರ, ಮುಂಬರುವ ಆವೃತ್ತಿಯು ಪೋಕ್ಮನ್, ಒನ್ ಪೀಸ್, ಸ್ಪೋರ್ಟ್ಸ್ ಕಾರ್ಡ್‌ಗಳು ಮತ್ತು ಇತರ ಟ್ರೇಡಿಂಗ್ ಕಾರ್ಡ್ ಆಟಗಳು ಮತ್ತು ಸಂಗ್ರಹಯೋಗ್ಯ ವಸ್ತುಗಳನ್ನು ಮಾರಾಟಗಾರರು, ಸೃಷ್ಟಿಕರ್ತರು, ಪಂದ್ಯಾವಳಿಗಳು ಮತ್ತು ವ್ಯಾಪಾರ ಅವಕಾಶಗಳೊಂದಿಗೆ ಒಳಗೊಂಡಿರುತ್ತದೆ.

ಈ ಕಾರ್ಯಕ್ರಮದ ಮೊದಲು ಮಾತನಾಡಿದ ಬೆಂಗಳೂರು ಕಾರ್ಡ್ ಶೋನ ಸಹ-ಸಂಸ್ಥಾಪಕ ಸಾಗರ್ ಎಸ್, "ಬೆಂಗಳೂರು ಕಾರ್ಡ್ ಶೋ ಸರಳ ಕಲ್ಪನೆಯೊಂದಿಗೆ ಪ್ರಾರಂಭವಾಯಿತು, ಭಾರತದಲ್ಲಿ ಸಂಗ್ರಹಕಾರರಾಗಿ ನಾವು ಯಾವಾಗಲೂ ಅನುಭವಿಸಲು ಬಯಸುವ ರೀತಿಯ ಕಾರ್ಡ್ ಶೋ ಅನ್ನು ರಚಿಸಲು. ನಮ್ಮ ಮೊದಲ ಆವೃತ್ತಿಗೆ ಪ್ರತಿಕ್ರಿಯೆಯು ಈ ಬೆಳೆಯುತ್ತಿರುವ ಸಮುದಾಯದ ಉತ್ಸಾಹ ಮತ್ತು ಸಾಮರ್ಥ್ಯವನ್ನು ನಮಗೆ ತೋರಿಸಿದೆ. ಃಅಖ 2.0 ನೊಂದಿಗೆ, ಸಂಗ್ರಹಕಾರರು, ಆಟಗಾರರು, ಬ್ರ್ಯಾಂಡ್‌ಗಳು ಮತ್ತು ಉತ್ಸಾಹಿಗಳ ಇನ್ನೂ ಹೆಚ್ಚಿನ ಪ್ರೇಕ್ಷಕರನ್ನು ಒಟ್ಟುಗೂಡಿಸಲು ನಾವು ಎದುರು ನೋಡುತ್ತಿದ್ದೇವೆ."

ಬೆಂಗಳೂರು ಕಾರ್ಡ್ ಶೋನ ಸಹ-ಸಂಸ್ಥಾಪಕ ರಯಾನ್ ಸತೀಶ್, "ಃಅಖ ಕಾರ್ಡ್‌ಗಳನ್ನು ವ್ಯಾಪಾರ ಮಾಡುವುದಕ್ಕಿಂತ ಹೆಚ್ಚಿನದಾಗಿದೆ; ಇದು ಹಂಚಿಕೆಯ ಉತ್ಸಾಹದ ಸುತ್ತ ಸಮುದಾಯವನ್ನು ನಿರ್ಮಿಸುವ ಬಗ್ಗೆ. ಈ ಆವೃತ್ತಿಯ ಮೂಲಕ, ಹೊಸಬರಿಗೆ ಸಂಗ್ರಹಣೆಯನ್ನು ಹೆಚ್ಚು ಪ್ರವೇಶಿಸುವಂತೆ ಮಾಡುವುದು ಮತ್ತು ಸ್ಥಾಪಿತ ಸಂಗ್ರಹಕಾರರು, ಬ್ರ್ಯಾಂಡ್‌ಗಳು ಮತ್ತು ರಚನೆಕಾರರು ಸಂಪರ್ಕ ಸಾಧಿಸಲು ಅವಕಾಶಗಳನ್ನು ಸೃಷ್ಟಿಸುವುದು ನಮ್ಮ ಗುರಿಯಾಗಿದೆ. ಭಾರತದ ಸಂಗ್ರಹಯೋಗ್ಯ ವಸ್ತುಗಳ ಪರಿಸರ ವ್ಯವಸ್ಥೆಯನ್ನು ಬಲಪಡಿಸುವುದು ಮತ್ತು ವ್ಯಾಪಾರ ಕಾರ್ಡ್‌ಗಳು ಮತ್ತು ಸಂಗ್ರಹಯೋಗ್ಯ ವಸ್ತುಗಳಿಗಾಗಿ ದೇಶವನ್ನು ಜಾಗತಿಕ ನಕ್ಷೆಯಲ್ಲಿ ಇರಿಸುವುದು ನಮ್ಮ ದೀರ್ಘಕಾಲೀನ ದೃಷ್ಟಿಯಾಗಿದೆ.

ಮಾರುಕಟ್ಟೆಗಿಂತ ಹೆಚ್ಚಿನದಾಗಿ ವಿನ್ಯಾಸಗೊಳಿಸಲಾದ ಬೆಂಗಳೂರು ಕಾರ್ಡ್ ಶೋ, ಅನುಭವಿ ಸಂಗ್ರಹಕಾರರು ಮತ್ತು ಮೊದಲ ಬಾರಿಗೆ ಹವ್ಯಾಸವನ್ನು ಕಂಡುಕೊಳ್ಳುವವರಿಗೆ ಅಂತರ್ಗತ ಸ್ಥಳವನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ. ಎಮರಾಲ್ಡ್ ಕಾರ್ಡ್ ಕಲೆಕ್ಟಿವ್ ಪ್ರೈ. ಲಿಮಿಟೆಡ್ ಮೂಲಕ, ಸಂಸ್ಥಾಪಕರು ಭಾರತದಲ್ಲಿ ಸಮುದಾಯ, ದೃಢೀಕರಣ ಮತ್ತು ಹವ್ಯಾಸಕ್ಕಾಗಿ ಹಂಚಿಕೆಯ ಉತ್ಸಾಹವನ್ನು ಕೇಂದ್ರೀಕರಿಸಿದ ಹೆಚ್ಚು ಸಂಘಟಿತ ಮತ್ತು ಸಂಪರ್ಕಿತ ಸಂಗ್ರಹಯೋಗ್ಯ ವಸ್ತುಗಳ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಪ್ರಯತ್ನಿಸುತ್ತಾರೆ.

ತುಮಕೂರು ದಸರಾದಲ್ಲಿ ನೃತ್ಯರೂಪಕದ ಮೂಲಕ ಕನ್ನಡ ನಾಡಿನ ಗತವೈಭವ ದರ್ಶನ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಪ್ರಭಾತ್ ಕಲಾವಿದರು ಪ್ರಸ್ತುತಪಡಿಸಿದ ಕರುನಾಡಿನ ವೈಭವ ನೃತ್ಯರೂಪಕವು ಕನ್ನಡ ನಾಡಿನ ಶಿಲ್ಪಕಲೆ, ಸಂಸ್ಕೃತಿ, ಪುರಾಣ, ಇತಿಹಾಸದ ಗತವೈಭವವನ್ನು ಪರಿಚಯಿಸಿತು.

ಮನಸೂರೆಗೊಂಡ ನೃತ್ಯರೂಪಕ :

ನಗರದ ಸರ್ಕಾರಿ ಜ್ಯೂನಿಯರ್ ಕಾಲೇಜು ಮೈದಾನದಲ್ಲಿ ದಸರಾ ಉತ್ಸವದ 10ನೇ ದಿನವಾದ ಮಂಗಳವಾರ ಅಮರಶಿಲ್ಪಿ ಚಕಣಾಚಾರಿ ಸಾಂಸ್ಕೃತಿಕ ವೈಭವ ಮಹಾವೇದಿಕೆಯಲ್ಲಿ ಸಂಜೆ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರದರ್ಶನವಾದ ಈ ನೃತ್ಯರೂಪಕವು ಪ್ರೇಕ್ಷಕರ ಮನಸೂರೆಗೊಂಡಿತು.

ನೃತ್ಯರೂಪಕದಲ್ಲಿ ಹೊಯ್ಸಳರ ಶೌರ್ಯ, ದಕ್ಷಿಣಾಪತೇಶ್ವರ ಶ್ರೀ ಕೃಷ್ಣದೇವರಾಯನ ವಿಜಯನಗರ ಸಾಮ್ರಾಜ್ಯದ ಕೀರ್ತಿ, ಪ್ರಪಂಚದಲ್ಲಿಯೇ ಅತೀ ಎತ್ತರದ ಏಕಶಿಲಾ ಮೂರ್ತಿ ಶ್ರವಣ ಬೆಳಗೊಳದ ಬಾಹುಬಲಿ ಕೆತ್ತನೆ, ಬೆಂದಕಾಳೂರಿನಿಂದ ರಾಜಧಾನಿ ಬೆಂಗಳೂರಾದ ಇತಿಹಾಸ, ಕನ್ನಡಿಗರ ಸತ್ಯ ಹಾಗೂ ನಿಷ್ಠೆಯನ್ನು ಸಾರುವ ಪುಣ್ಯಕೋಟಿ ಕತೆ, ತುಮಕೂರಿನ ಪ್ರಸಿದ್ಧ ದೇವರಾಯನದುರ್ಗ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ಪುರಾಣ, ನಾಮದ ಚಿಲುಮೆ, ಸಿದ್ಧಗಂಗಾ ಮಠದ ತ್ರಿವಿಧ ದಾಸೋಹಿ ಡಾ: ಶ್ರೀಶ್ರೀಶ್ರೀ ಶಿವಕುಮಾರಸ್ವಾಮೀಜಿ ಹಾಗೂ ಶಿಕ್ಷಣ ಭೀಷ್ಮ ಹೆಚ್.ಎಂ. ಗಂಗಾಧರಯ್ಯ ಅವರ ಸ್ಮರಣೆ ಸೇರಿದಂತೆ ಕರುನಾಡಿನ ಇತಿಹಾಸ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಯಿತು. ದಸರಾ ವೈಭವವನ್ನು ಕಣ್ತುಂಬಿಕೊಳ್ಳಲು



ಮೈತುಂಬಾ ಕಣ್ಣುಗಳಿರಬೇಕು :-

ಅಮೆರಿಕಾ-ಅಮೆರಿಕಾ ಚಲನಚಿತ್ರದ ನೂರು ಜನ್ಮಕೂ ನೂರಾರು ಜನ್ಮಕೂ ಗೀತೆಯೊಂದಿಗೆ ವೇದಿಕೆಗೆ ಆಗಮಿಸಿದ ಖ್ಯಾತ ಚಲನಚಿತ್ರ ನಟ, ನಿರ್ದೇಶಕ ರಮೇಶ್ ಅರವಿಂದ್ ಮಾತನಾಡಿ, ತುಮಕೂರು ದಸರಾ ವೈಭವವನ್ನು ಕಣ್ತುಂಬಿಕೊಳ್ಳಲು ಎರಡು ಕಣ್ಣು ಸಾಲದು. ಮೈತುಂಬಾ ಕಣ್ಣುಗಳಿರಬೇಕೆಂದು ಅಭಿಪ್ರಾಯಪಟ್ಟರು.

ದಸರಾ ಉತ್ಸವದ ಸಾಂಸ್ಕೃತಿಕ ವೇದಿಕಗೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಅವರು, ಮೊಬೈಲ್ ಯುಗದಲ್ಲಿಯೂ ಇಷ್ಟೊಂದು ಸಂಖ್ಯೆಯಲ್ಲಿ ಸೇರಿರುವ ತುಮಕೂರಿನ ಜನತೆಯ ಉತ್ಸಾಹ ನೋಡುತ್ತಿದ್ದರೆ ಹಳೆಯ ಮೈಸೂರು ದಸರಾ ಎಷ್ಟೊಂದು ಸುಂದರ ಹಾಡಿನಂತೆ ತುಮಕೂರು ದಸರಾ ಎಷ್ಟೊಂದು ಸುಂದರ ಎಂದು ಹೊಸ ಹಾಡು ಬರೆಯುವಂತೆ ಭಾಸವಾಗುತ್ತದೆ ಎಂದು ಹೇಳಿದರು.



ದಸರಾ ಉತ್ಸವದ ಅಂಗವಾಗಿ ಇಲ್ಲಿ ಆಯೋಜಿಸಿರುವ ಫಲ-ಪುಷ್ಪ ಪ್ರದರ್ಶನ, ಕಲಾ ಮತ್ತು ಜ್ಞಾನ ವೈಭವ ಪ್ರದರ್ಶನ, ಹೆಲಿಕಾಪ್ಟರ್ ಪ್ರದರ್ಶನ, ಫ್ಲೋಟಿಂಗ್ ರೆಸ್ಟೋರೆಂಟ್, ಮತ್ತಿತರ ವಿನೂತನ ಕಾರ್ಯಕ್ರಮಗಳು ಜನಾಕರ್ಷಕವಾಗಿವೆ ಎಂದರು.



ಸಣ್ಣ-ಪುಟ್ಟ ತಪ್ಪು ಮಾಡಿದರೂ ಕ್ಷಮಿಸಿ ನಮ್ಮ ಆಸೆ-ಗುರಿಯನ್ನು ಈಡೇರಿಸಿಕೊಳ್ಳಲು ಅನುಗ್ರಹಿಸುವ ತಾಯಿ ಚಾಮುಂಡೇಶ್ವರಿ



ದೇವಿಯು ಕಲ್ಪತರು ನಾಡಿದ ಎಲ್ಲರ ಕನಸನ್ನು ನನಸಾಗಿಸಲಿ ಎಂದು ಶುಭ ಹಾರೈಸಿದರು.

ತಾಯಿಯ ಪೂಜೆಗಿಂತ ಮಿಗಿಲಾದ ಮತ್ತೊಂದು ಪೂಜೆಯಿಲ್ಲ. ಮಹಿಳೆಯರಿಗೆ ಸ್ಥಾನಮಾನ, ಸುರಕ್ಷತೆ, ಪ್ರೋತ್ಸಾಹ ನೀಡುವುದು ದೇವಿಯನ್ನು ಪೂಜೆ ಮಾಡಿದಷ್ಟೇ ಪುಣ್ಯ ದೊರೆಯುತ್ತದೆ ಎಂದು ಮಾರ್ಮಿಕವಾಗಿ ನುಡಿದರು.

ಇದಕ್ಕೂ ಮುನ್ನ ರ‍್ಯಾಂಪ್ ವಾಕ್ ಮೂಲಕ ಅಭಿಮಾನಿಗಳ ಬಳಿ ಸಾಗಿ ಹಸ್ತಲಾಘವ ಮಾಡಿದರಲ್ಲದೆ, ದಸರಾ ಉತ್ಸವದ ಶುಭಾಶಯಗಳನ್ನು ಕೋರಿದರು.

ಬಹುಮುಖ ಪ್ರತಿಭೆ ರಮೇಶ್ ಅರವಿಂದ್ :

ಉಪಮುಖ್ಯಮಂತ್ರಿ ಡಾ: ಜಿ. ಪರಮೇಶ್ವರ ಮಾತನಾಡಿ, ಚಿತ್ರರಂಗದಲ್ಲಿ ಮಾನವೀಯತೆ ಮೌಲ್ಯವುಳ್ಳ ಕಲಾಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ ಕನ್ನಡದ ಏಕೈಕ ಬಹುಮುಖ ಪ್ರತಿಭೆ ರಮೇಶ್ ಅರವಿಂದ್ ಅವರು ಎಂದರೆ ತಪ್ಪಾಗಲಾರದು. ಇವರು ತಮ್ಮ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಪ್ರಖ್ಯಾತಿ ಗಳಿಸಲು ದೇವಿಯು ಆಶೀರ್ವದಿಸಲಿ ಎಂದು ಶುಭ ಹಾರೈಸಿದರು.

ನಂತರ ಸಂಜಿತ್ ಹೆಗ್ಡೆ ಮತ್ತು ತಂಡದಿಂದ ಏರ್ಪಡಿಸಿದ್ದ ಸಂಗೀತ ರಸಸಂಜೆ ಕಾರ್ಯಕ್ರಮ ಪ್ರೇಕ್ಷಕರ ಮನರಂಜಿಸಿತು.

ಉಪಮುಖ್ಯಮಂತ್ರಿಗಳಿಂದ ಗೌರವ

ಉಪಮುಖ್ಯಮಂತ್ರಿ ಡಾ: ಜಿ. ಪರಮೇಶ್ವರ ಅವರು ದಸರಾ ಮಹೋತ್ಸವ ಯಶಸ್ಸಿಗೆ ಕಾರಣರಾದ ಅಧಿಕಾರಿಗಳು, ಅಧಿಕಾರೇತರರು, ಪಾಲಿಕೆಯ ಎಲ್ಲಾ ಪೌರಕಾರ್ಮಿಕರು, ಪಂಜಿನ ಕವಾಯತಿನಲ್ಲಿ ಪಾಲ್ಗೊಂಡ ಮಕ್ಕಳು ಹಾಗೂ ತರಬೇತಿದಾರರು, ದಸರಾ ಉತ್ಸವ ಆಚರಣೆಯ ವಿವಿಧ ಸಮಿತಿಗಳ ಸದಸ್ಯರು, ಸೇರಿದಂತೆ ಮತ್ತಿತರರನ್ನು ಗೌರವಿಸಿ ಸನ್ಮಾನಿಸಿದರು.

ನವದೆಹಲಿಯ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಶಾಸಕರಾದ ಜಿ.ಬಿ. ಜ್ಯೋತಿ ಗಣೇಶ್, ಉಪಮುಖ್ಯಮಂತ್ರಿಗಳ ಧರ್ಮಪತ್ನಿ ಕನ್ನಿಕಾ ಪರಮೇಶ್ವರಿ, ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜಾ, ಪಾಲಿಕೆ ಆಯುಕ್ತೆ ಶುಭ, ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ, ತಹಶೀಲ್ದಾರ್ ರಾಜೇಶ್ವರಿ ಸೇರಿದಂತೆ ವಿವಿಧ ಜನಪ್ರತಿನಿಧಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ರಾತ್ರಿ ಮಲಗುವ ಮುನ್ನ ಲವಂಗದ ನೀರನ್ನು ಕುಡಿಯೋದ್ರಿಂದ ಲಭಿಸುವ ಪ್ರಯೋಜನಗಳೇನು

ಸೂರ್ಯಪ್ರಗತಿನ್ಯೂಸ್.ಕಾಂ

ಲವಂಗವು ಆಹಾರದ ರುಚಿಯನ್ನು ಹೆಚ್ಚಿಸುವ ಅದ್ಭುತವಾದ ಮಸಾಲೆ ಪದಾರ್ಥವಾಗಿದೆ. ಅಷ್ಟೇ ಅಲ್ಲದೆ ಇದು ಆರೋಗ್ಯಕ್ಕೂ ಸಖತ್ ಪ್ರಯೋಜನಕಾರಿ. ಇದರಲ್ಲಿ ಆಂಟಿ ಆಕ್ಸಿಡೆಂಟ್, ವಿಟಮಿನ್ ಸಿ, ಫೈಬರ್ ಇತ್ಯಾದಿ ಪೋಷಕಾಂಶಗಳು ಹೇರಳವಾಗಿದ್ದು, ಇದು ಜೀರ್ಣಕ್ರಿಯೆನ್ನು ಸುಧಾರಿಸುವುದರಿಂದ ಹಿಡಿದು ಬಾಯಿಯ ದುರ್ವಾಸನೆ ಹೋಗಲಾಡಿಸುವವರೆಗೆ ಸಾಕಷ್ಟು ಅದ್ಭುತ ಪ್ರಯೋಜನಗಳನ್ನು ಹೊಂದಿದೆ. ಹೀಗಿರುವಾಗ ನಿತ್ಯ ರಾತ್ರಿ ಮಲಗುವ ಮುನ್ನ ಒಂದು ಲೋಟ ಲವಂಗದ ನೀರನ್ನು ಕುಡಿಯುವುದರಿಂದ ದೇಹಕ್ಕೆ ಏನೆಲ್ಲಾ ಲಾಭಗಳು ದೊರೆಯುತ್ತವೆ ಎಂಬುದನ್ನು ನೋಡೋಣ ಬನ್ನಿ.

ಗಾತ್ರದಲ್ಲಿ ಸಣ್ಣದಾಗಿದ್ದರೂ, ಲವಂಗವು (ಛಿಟಠಿತಜ) ಅದ್ಭುತ ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ. ಹೌದು ಭಾರತೀಯ ಪಾಕಪದ್ಧತಿಯಲ್ಲಿ ಹೇರಳವಾಗಿ ಬಳಸಲಾಗುವ ಲವಂಗ ಕೇವಲ ಮಸಾಲೆ ಪದಾರ್ಥ ಮಾತ್ರವಲ್ಲ ಆರೋಗ್ಯದ ನಿಧಿಯೂ ಆಗಿದೆ. ಉತ್ಕರ್ಷಣ ನಿರೋಧಕ ಗುಣಗಳಿಂದ ಸಮೃದ್ಧವಾಗಿರುವ ಈ ಮಸಾಲೆ ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಿಸಲು, ರೋಗನಿರೋಧಕ



ಶಕ್ತಿಯನ್ನು ಹೆಚ್ಚಿಸಲು, ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಲು ಸಹಕಾರಿಯಾಗಿದೆ. ಆದ್ದರಿಂದಲೇ ಸಾಂಪ್ರದಾಯಿಕ ಔಷಧದಲ್ಲಿಯೂ ಇದನ್ನು ಬಳಸಲಾಗುತ್ತದೆ. ಇಷ್ಟೆಲ್ಲಾ ಆರೋಗ್ಯ ಪ್ರಯೋಜನಗಳನ್ನು ಹೊಂದಿರುವ ಲವಂಗವನ್ನು ಒಂದು ಗ್ಲಾಸ್ ನೀರಿಗೆ ಹಾಕಿ ರಾತ್ರಿ ಮಲಗುವ ಮುನ್ನ ಕುಡಿದರೆ ದೇಹಕ್ಕೆ ಏನೆಲ್ಲಾ ಲಾಭಗಳು ಲಭಿಸುತ್ತವೆ ಎಂಬುದನ್ನು ನೋಡೋಣ ಬನ್ನಿ.

ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ:

ಅನೇಕ ಜನರು ರಾತ್ರಿಯಲ್ಲಿ ಹೊಟ್ಟೆಯುಬ್ಬರ ಮತ್ತು ಗ್ಯಾಸ್‌ನಂತಹ ಜೀರ್ಣಕಾರಿ ಸಮಸ್ಯೆಗಳನ್ನು ಅನುಭವಿಸುತ್ತಾರೆ. ನೀವು ಈ ಸಮಸ್ಯೆಗಳಿಂದ ಬಳಲುತ್ತಿದ್ದರೆ, ಲವಂಗದ ನೀರನ್ನು ಕುಡಿಯುವುದರಿಂದ ಈ ಸಮಸ್ಯೆಗೆ ಪರಿಹಾರವನ್ನು ಪಡೆಯಬಹುದು. ಇದಲ್ಲದೆ ಲವಂಗವು ಅತಿಸಾರ ಮತ್ತು ಎದೆಯುರಿ ಮುಂತಾದ ಲಕ್ಷಣಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ.

ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ:

ನಿಮ್ಮ ರೋಗನಿರೋಧಕ ಶಕ್ತಿಯನ್ನು ಬಲಪಡಿಸಲು ನೀವು ರಾತ್ರಿ ಮಲಗುವ ಮುನ್ನ ಲವಂಗದ ನೀರನ್ನು ಸೇವನೆ ಮಾಡಬಹುದು. ಲವಂಗವು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿದ್ದು, ಇದರ ನೀರನ್ನು ಕುಡಿಯುವುದರಿಂದ ಹಾನಿಕಾರಕ ಸೋಂಕುಗಳ ವಿರುದ್ಧ ಹೋರಾಡುವ ನಿಮ್ಮ ದೇಹದ ಸಾಮರ್ಥ್ಯವ ಹೆಚ್ಚುತ್ತದೆ.

ಬಾಯಿಯ ಆರೋಗ್ಯವನ್ನು ಸುಧಾರಿಸುತ್ತದೆ:

ಲವಂಗದಲ್ಲಿರುವ ಯುಜೆನಾಲ್ ಅಂಶ ಬಾಯಿಯ ಆರೋಗ್ಯಕ್ಕೂ ಅಪಾರ ಪ್ರಯೋಜನಗಳನ್ನು ನೀಡುತ್ತವೆ. ಯುಜೆನಾಲ್ ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿದ್ದು, ಅದು ಬಾಯಿಯಲ್ಲಿ ಹಾನಿಕಾರಕ ಬ್ಯಾಕ್ಟೀರಿಯಾಗಳ ಬೆಳವಣಿಗೆಯನ್ನು ತಡೆಯಲು ಸಹಾಯ ಮಾಡುತ್ತದೆ. ಬಾಯಿಯ ದುರ್ವಾಸನೆ ಕಡಿಮೆಯಾಗುತ್ತದೆ.

ಉತ್ತಮ ನಿದ್ರೆ ಪಡೆಯಲು ಸಹಕಾರಿ:

ಲವಂಗ ನೀರು ಆಳವಾದ ನಿದ್ರೆಗೆ ಒಂದು ಉತ್ತಮ ವರದಾನ. ಇದು ಶಾಂತಗೊಳಿಸುವ ಗುಣಗಳನ್ನು ಹೊಂದಿದ್ದು, ಈ ಗುಣಗಳು ಮನಸ್ಸು ಮತ್ತು ದೇಹ ಎರಡನ್ನೂ ವಿಶ್ರಾಂತಿ ಮಾಡುತ್ತದೆ, ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ನಿದ್ರಾಹೀನತೆ ಸಮಸ್ಯೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ. ಲವಂಗ ನೀರನ್ನು ನಿಯಮಿತವಾಗಿ ಕುಡಿಯುವುದರಿಂದ ರಾತ್ರಿಯಿಡೀ ನೆಮ್ಮದಿಯ ನಿದ್ರೆಯನ್ನು ಪಡೆಯಬಹುದು. ಅಲ್ಲದೆ ಲವಂಗದ ನೀರು ಕುಡಿಯುವುದರಿಂದ ದೇಹವು ಸಂಪೂರ್ಣವಾಗಿ ಚೈತನ್ಯಶೀಲವಾಗಿರುತ್ತದೆ.

ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಕಾರಿ:

ಲವಂಗ ನೀರು ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಲವಂಗ ಇನ್ಸುಲಿನ್ ಕಾರ್ಯವನ್ನು ಸುಧಾರಿಸುತ್ತದೆ, ಲವಂಗದ ನೀರನ್ನು ನಿಯಮಿತವಾಗಿ ಸೇವಿಸುವುದರಿಂದ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಸ್ಥಿರವಾಗಿಟ್ಟುಕೊಳ್ಳಬಹುದು. ಅಲ್ಲದೆ ಲವಂಗದ ನೀರು ಕಾಲೋಚಿತ ಕಾಯಿಲೆಗಳು ಮತ್ತು ಸೋಂಕುಗಳ ಅಪಾಯವನ್ನು ಕಡಿಮೆ ಮಾಡುತ್ತದೆ.

ದೇಹದದಿಂದ ವಿಷವನ್ನು ಹೊರಹಾಕಲು ಸಹಕಾರಿ:

ರಾತ್ರಿ ಮಲಗುವ ಮುನ್ನ ಲವಂಗದ ನೀರನ್ನು ಕುಡಿಯುವುದರಿಂದ ದೇಹ ನಿರ್ವಿಷಗೊಳ್ಳುತ್ತದೆ. ಅಲ್ಲದೆ ಇದು ಯಕೃತ್ತು ಮತ್ತು ಮೂತ್ರಪಿಂಡಗಳು ಸರಿಯಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡುತ್ತದೆ. ರಕ್ತವನ್ನು ಶುದ್ಧೀಕರಣಗೊಳಿಸಿ ಚರ್ಮದ ಮೇಲಿನ ಮೊಡವೆಗಳು ಮತ್ತು ಕಲೆಗಳನ್ನು ನಿವಾರಿಸಲು ಕೂಡ ಸಹಾಯ ಮಾಡುತ್ತದೆ.

ಲವಂಗದ ನೀರನ್ನು ತಯಾರಿಸುವುದು ಹೇಗೆ?


ಲವಂಗದ ನೀರನ್ನು ತಯಾರಿಸುವುದು ತುಂಬಾ ಸುಲಭ. ಒಂದು ಪಾತ್ರೆಯಲ್ಲಿ ನೀರನ್ನು ಬಿಸಿ ಮಾಡಿ, ಅದಕ್ಕೆ ಲವಂಗ ಸೇರಿಸಿ, 5 ರಿಂದ 7 ನಿಮಿಷಗಳ ಕಾಲ ಕಡಿಮೆ ಉರಿಯಲ್ಲಿ ಕುದಿಸಿ. ಸ್ವಲ್ಪ ತಣ್ಣಗಾಗಿಸಿ ಮತ್ತು ಸೋಸಿ. ಉಗುರು ಬೆಚ್ಚಗಿರುವಾಗಲೇ ಲವಂಗದ ನೀರನ್ನು ಕುಡಿಯಿರಿ. ರುಚಿಯನ್ನು ಹೆಚ್ಚಿಸಲು ನೀವು ಸ್ವಲ್ಪ ನಿಂಬೆ ರಸ ಅಥವಾ ಜೇನುತುಪ್ಪವನ್ನು ಕೂಡ ಸೇರಿಸಬಹುದು.

ಚುನಾವಣಾ ಆಯುಕ್ತರಿಗೆ ರಕ್ಷಣೆ ನೀಡುವ ಕಾನೂನು ರದ್ದುಗೊಳಿಸಿ; ಜ್ಞಾನೇಶ್ ಕುಮಾರ್ ವಜಾಗೊಳಿಸಿ: ಮಲ್ಲಿಕಾರ್ಜುನ ಖರ್ಗೆ ಆಗ್ರಹ

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಖರ್ಗೆ, "ನೀವು ಸಂವಿಧಾನಕ್ಕಿಂತ ದೊಡ್ಡವರೇ?" ಎಂದು ಪ್ರಶ್ನಿಸಿದರು ಮತ್ತು ಸರ್ಕಾರವು ಚುನಾವಣಾ ಆಯುಕ್ತರನ್ನು ಹೊಣೆಗಾರಿಕೆಯಿಂದ ರಕ್ಷಿಸುತ್ತಿದೆ ಎಂದು ಆರೋಪಿಸಿದರು.

ನರೇಂದ್ರ ಮೋದಿ ಸರ್ಕಾರವು ಚುನಾವಣಾ ಆಯೋಗದ(EC) ಸ್ವಾಯತ್ತತೆಯನ್ನು ದುರ್ಬಲಗೊಳಿಸುತ್ತಿದೆ ಎಂದು ಆರೋಪಿಸಿದ ಎಐಸಿಸಿ(ಂಖಅಅ) ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಚುನಾವಣಾ ಆಯುಕ್ತರಿಗೆ ಕಾನೂನು ರಕ್ಷಣೆ(immunity) ನೀಡುವ 2023ರ ಕಾಯ್ದೆಯನ್ನು ರದ್ದುಗೊಳಿಸಬೇಕೆಂದು ಬುಧವಾರ ಆಗ್ರಹಿಸಿದ್ದಾರೆ. ಅಲ್ಲದೆ, ಮುಖ್ಯ ಚುನಾವಣಾ ಆಯುಕ್ತ(ಅಇಅ) ಜ್ಞಾನೇಶ್ ಕುಮಾರ್ ಅವರನ್ನು ತಕ್ಷಣವೇ ಹುದ್ದೆಯಿಂದ ವಜಾಗೊಳಿಸಬೇಕು ಹಾಗೂ ಮತ್ತೆ ಮತಪತ್ರ (ballot papers) ಪದ್ಧತಿಗೆ ಮರಳಬೇಕು ಎಂದು ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಖರ್ಗೆ, "ನೀವು ಸಂವಿಧಾನಕ್ಕಿಂತ ದೊಡ್ಡವರೇ?" ಎಂದು ಪ್ರಶ್ನಿಸಿದರು ಮತ್ತು ಸರ್ಕಾರವು ಚುನಾವಣಾ ಆಯುಕ್ತರನ್ನು ಹೊಣೆಗಾರಿಕೆಯಿಂದ ರಕ್ಷಿಸುತ್ತಿದೆ ಎಂದು ಆರೋಪಿಸಿದರು.



'ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರ(ನೇಮಕಾತಿ, ಸೇವೆಯ ಷರತ್ತುಗಳು ಮತ್ತು ಅಧಿಕಾರಾವಧಿ) ಕಾಯ್ದೆ, 2023' ಅನ್ನು ಉಲ್ಲೇಖಿಸಿದ ಖರ್ಗೆ, "ಚುನಾವಣಾ ಆಯುಕ್ತರಿಗೆ ರಕ್ಷಣೆ ನೀಡಲು ನೀವು ತಂದಿರುವ ಕಾನೂನನ್ನು ರದ್ದುಗೊಳಿಸಿ" ಎಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು.

ಈ ಕಾಯ್ದೆಯು, ಚುನಾವಣಾ ಆಯುಕ್ತರು ತಮ್ಮ ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವಾಗ ಕೈಗೊಂಡ ಕ್ರಮಗಳು ಅಥವಾ ಆಡಿದ ಮಾತುಗಳಿಗೆ ಸಂಬಂಧಿಸಿದಂತೆ, ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳಿಂದ ಅವರಿಗೆ ರಕ್ಷಣೆ ನೀಡುತ್ತದೆ.

" ಚುನಾವಣೆಗಳು ನಿಷ್ಪಕ್ಷಪಾತವಾಗಿ ಮತ್ತು ನ್ಯಾಯಯುತವಾಗಿ ನಡೆದರೆ, ಯಾರೇ ಗೆಲ್ಲಲಿ, ನಮಗೆ ಅಭ್ಯಂತರವಿಲ್ಲ. ಕಾಂಗ್ರೆಸ್ ಪಕ್ಷವೇ ಗೆಲ್ಲಬೇಕು ಅಥವಾ ನಿರ್ದಿಷ್ಟ ಪಕ್ಷವೊಂದೇ ಗೆಲ್ಲಬೇಕು ಎಂದು ಸಂವಿಧಾನದಲ್ಲಿ ಎಲ್ಲೂ ಹೇಳಿಲ್ಲ," ಎಂದು ಅವರು ಹೇಳಿದರು.

ಯಾವುದೇ ವ್ಯಕ್ತಿ ಅಥವಾ ಪಕ್ಷಕ್ಕಾಗಿ ಅಲ್ಲ, ಬದಲಾಗಿ ಪ್ರಜಾಪ್ರಭುತ್ವವನ್ನು ರಕ್ಷಿಸಲು ಮತ್ತು ಸಾಂವಿಧಾನಿಕ ಸಂಸ್ಥೆಗಳ ಘನತೆಯನ್ನು ಕಾಪಾಡಲು ವಿರೋಧ ಪಕ್ಷಗಳು ಹೋರಾಡುತ್ತಿವೆ ಎಂದು ಅವರು ಪ್ರತಿಪಾದಿಸಿದರು.

ಪ್ರಧಾನಿ ಮೋದಿ ಅವರಿಗೆ ವಿರೋಧ ಪಕ್ಷದ ನಾಯಕರು ಬರೆದ ಪತ್ರಗಳಿಗೆ ಅವರು ನೇರವಾಗಿ ಉತ್ತರಿಸದೆ, ಬೇರೆಯವರ ಮೂಲಕ ಉತ್ತರ ಕೊಡಿಸುತ್ತಿದ್ದಾರೆ ಎಂದು ಖರ್ಗೆ ಟೀಕಿಸಿದರು.

ಮೋದಿ ಅವರಿಗೆ ತಾವು ಬರೆದ ಪತ್ರಕ್ಕೆ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ನೀಡಿರುವ ಪ್ರತಿಕ್ರಿಯೆಯನ್ನು ಉಲ್ಲೇಖಿಸಿದ ಖರ್ಗೆ, ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ವಿಷಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳದ ಹೊರತು, ಇಂತಹ ಉತ್ತರಗಳಿಂದ ಸಮಸ್ಯೆಗಳು ಬಗೆಹರಿಯುವುದಿಲ್ಲ ಎಂದು ಅವರು ಹೇಳಿದರು.

"ನೀವು ಏಕಪಕ್ಷೀಯವಾಗಿ ಅಥವಾ ನಿರಂಕುಶವಾಗಿ ವರ್ತಿಸಲು ನಿರ್ಧರಿಸಿದ್ದರೆ, ಈ ದೇಶದ ಜನ ಸುಮ್ಮನೆ ಕೂರುವುದಿಲ್ಲ. ಅವರು ನಿಮ್ಮನ್ನು ಅಧಿಕಾರದಿಂದ ಕೆಳಗಿಳಿಸುತ್ತಾರೆ" ಎಂದು ಅವರು ಖರ್ಗೆ ಎಚ್ಚರಿಸಿದರು.

ದತ್ತಾಂಶಗಳ ಸಂರಕ್ಷಣೆ ಕುರಿತ ಐದು ದಿನಗಳ ಕಾರ್ಯಾಗಾರ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಮತ್ತು ಶ್ರೀ ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ರೋಬೋಟಿಕ್ಸ್ ಮತ್ತು ಕೃತಕ ಬುದ್ಧಿಮತ್ತೆ ವಿಭಾಗ ವತಿಯಿಂದ ಸುಧಾರಿತ ಪೈಥಾನ್ ಪರಿಕಲ್ಪನೆಗಳು ಫೈಲ್ ನಿರ್ವಹಣೆ ಮತ್ತು ದತ್ತಾಂಶಗಳ ಸಂಸ್ಕರಣೆ ಕುರಿತ 5 ದಿನಗಳ ಕಾರ್ಯಾಗಾರವನ್ನು ಯಶಸ್ವಿಯಾಗಿ ನಡೆಸಲಾಯಿತು.

ಕ್ಯಾಂಪಸ್ ಸಭಾಂಗಣದಲ್ಲಿ ನಡೆದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಬೆಂಗಳೂರಿನ ನ್ಯೂರೋ ಟೆಕ್ ಎಲ್‌ಎಲ್‌ಪಿ ಉದ್ಯಮ ಸಂಸ್ಥೆಯ ಪ್ರಾಜೆಕ್ಟ್ ಮುಖ್ಯಸ್ಥರಾದ ತುಷಾರ್ ಎಸ್ ಮಾತನಾಡಿ, ಮೌಲ್ಯವರ್ಧಿತ ಕೋರ್ಸ್‌ಗಳ ಅಧ್ಯಯನದಿಂದ ಶೈಕ್ಷಣಿಕ ಗುಣಮಟ್ಟ ಸುಧಾರಣೆಯಾಗುತ್ತದೆ. ಅಡ್ವಾನ್ಸ್ಡ್ ಪೈಥಾನ್ ಪರಿಕಲ್ಪನೆಗಳಿಂದ ನೈಜ-ಪ್ರಪಂಚದ ಅನ್ವಯಗಳವರೆಗೆ ಸಂಕೇತಿಕರಣ ಮಾಡಿ ಕಲಿಕೆಯನ್ನು ಹೆಚ್ಚು ಮಾಡಿಕೊಳ್ಳಬೇಕು. ಆ ಮೂಲಕ ಸಮಸ್ಯೆಗಳಿಗೆ ಪರಿಹಾರ



ಕಂಡುಕೊಳ್ಳಬೇಕು ಎಂದರು.

ಸುಧಾರಿತ ಪೈಥಾನ್ ಪರಿಕಲ್ಪನೆಗಳು, ಫೈಲ್ ನಿರ್ವಹಣೆ ಮತ್ತು ದತ್ತಾಂಶಗಳ ಸಂಸ್ಕರಣೆ ಮತ್ತು ವಿಶ್ಲೇಷಣೆ, ದೃಶ್ಯೀಕರಣ, ವೆಬ್ ಡೇಟಾ ಸ್ವಯಂಚಾಲಿತಗೊಳಿಸುವಿಕೆ ಮತ್ತು ಸ್ಕ್ರಿಪ್ಟಿಂಗ್, ಮಿನಿ ಪ್ರಾಜೆಕ್ಟ್‌ಗಳು ಮತ್ತು ಪ್ರಕರಣ ಅಧ್ಯಯನಗಳು ವಾಸ್ತವ ಜಗತ್ತಿನ ಅನ್ವಯಕಗಳಾಗಿವೆ ಎಂದು ಅವರು ಹೇಳಿದರು.

ಶ್ರೀ ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲರಾದ ಡಾ. ಮಹಂತೇಶ್ ಎಂ. ನಡಕಟ್ಟಿ ಮಾತನಾಡಿ, ಇಂಜಿನಿಯರಿಂಗ್ ಸಂಶೋಧನೆಗಳ ಮೂಲಕ ವಾಸ್ತವ ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದರು.

ಕಾರ್ಯಾಗಾರದ ಆಯೋಜಕ ಸಮಿತಿಯ ಅಧ್ಯಕ್ಷರು ಹಾಗೂ ರೋಬೋಟಿಕ್ಸ್ ಮತ್ತು ಎಐ ವಿಭಾಗ ಮುಖ್ಯಸ್ಥರಾದ ಡಾ. ಸುಮನಾ ಎಲ್, ಅಧ್ಯಾಪಕ ಸಂಯೋಜಕರುಗಳಾದ ಕೌಸರ್ ತಾಜ್ , ನರಸಿಂಹ ಹೆಚ್ ಹಾಗೂ ರೋಬೋಟಿಕ್ಸ್ ಮತ್ತು ಎಐ ವಿಭಾಗ ಪ್ರಾಧ್ಯಾಪಕರು, ಐಇಇಇ ಕಮ್ಯುನಿಕೇಷನ್ಸ್ ಸೊಸೈಟಿ ವಿದ್ಯಾರ್ಥಿ ಘಟಕ ಸದಸ್ಯರು ಮತ್ತು ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ದಸರಾ ನಾಟಕೋತ್ಸವದಲ್ಲಿ ಒನಕೆ ಓಬವ್ವ ನಾಟಕ ಪ್ರದರ್ಶನ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು ದಸರಾ 2026 ರ ಅಂಗವಾಗಿ ತುಮಕೂರಿನ ಡಾ. ಗುಬ್ಬಿ ವೀರಣ್ಣ ಕಲಾಕ್ಷೇತ್ರ ದಲ್ಲಿ ಆಯೋಜಿಸಲಾಗಿದ್ದ ದಸರಾ ನಾಟಕೋತ್ಸವ ದಲ್ಲಿ ಜಿಲ್ಲಾಡಳಿತ ತುಮಕೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಪ್ರಪ್ರಥಮ ಬಾರಿಗೆ ವೀರ ವನಿತೆ ಒನಕೆ ಓಬವ್ವ ಐತಿಹಾಸಿಕ ನಾಟಕವನ್ನು ಪ್ರದರ್ಶಿಸಲಾಯಿತು. ಸಾಲುಮರದ ತಿಮ್ಮಕ್ಕ ಸಮುದಾಯ ಸೇವಾ ಟ್ರಸ್ಟ್ (ರಿ) ತಂಡದ ಕಲಾವಿದರು ಗೊಲ್ಲಹಳ್ಳಿ ಬಾಲಕೃಷ್ಣ ಕೌತ ಮಾರನಹಳ್ಳಿ ಕಾಂತರಾಜು ಅವರ ಸಹಕಾರದೊಂದಿಗೆ ನಿರ್ದೇಶಿಸಿದ ಈ ನಾಟಕ ಒನಕೆ ಓಬವ್ವ ಹುಟ್ಟಿ ಬೆಳೆದ ಪರಿಸರ ಮತ್ತವರ ಕುಟುಂಬದ ತ್ಯಾಗ ಧೈರ್ಯ ಸಾಹಸವನ್ನು ನೈಜತೆಯ ನೆಲೆಗಟ್ಟಿನಲ್ಲಿ ಕಟ್ಟಿಕೊಡುವಲ್ಲಿ ಯಶಸ್ವಿಯಾಯಿತು. ನಾಟಕವನ್ನು ಆರಂಭದಿಂದ ಕೊನೆಯವರೆಗೂ ವೀಕ್ಷಿಸಿದ ಕಲಾಭಿಮಾನಿಗಳು ಇತಿಹಾಸ ಆಸಕ್ತರು ಅಣ್ಣನ ಪ್ರಯತ್ನವನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು.



ನಾಟಕದ ಕುರಿತು ಅನಿಸಿಕೆಯನ್ನು ವ್ಯಕ್ತಪಡಿಸಿದ ಹಿರಿಯ ರಂಗಕರ್ಮಿ ಕಥಾ ಕೀರ್ತನಕಾರ ಕಲಾಶ್ರೀ ಡಾಕ್ಟರ್ ಲಕ್ಷ್ಮಣ ದಾಸ್ ಅವರು ಓಬವ್ವನ ನೈಜ ಇತಿಹಾಸವನ್ನು ಈ ನಾಟಕ ತೆರೆದಿಟ್ಟಿದೆ. ಓಬವ್ವ ಮತ್ತು ಅವರ ಕುಟುಂಬದ ಬಗ್ಗೆ ನಮಗೆ ಗೊತ್ತಿಲ್ಲದ ಹೊಸ ವಿಷಯಗಳನ್ನು ಈ ನಾಟಕ ಪರಿಚಯಿಸಿದೆ.ಇಂತಹ ನಾಟಕಗಳನ್ನು ರಚಿಸಲು ಸಾಕಷ್ಟು ಅಧ್ಯಯನ ಸಂಶೋಧನೆ ಮಾಡಬೇಕಾಗುತ್ತದೆ ಅದಕ್ಕೆ ಸಾಕಷ್ಟು ಸಮಯ ಮತ್ತು ಪರಿಶ್ರಮ ಬೇಕಾಗುತ್ತದೆ. ನಾಟಕವನ್ನು ರಚಿಸಿರುವ ಕೆ ಮಂಜುನಾಥ ಕೋಟೆಕೆರೆ ಅವರ ಪ್ರಯತ್ನ ಯಶಸ್ವಿಯಾಗಿದೆ. ಇಂತಹ ವಾಸ್ತವಿಕ ನೆಲೆಗಟ್ಟಿನ ಇನ್ನಷ್ಟು ಕಥೆಗಳನ್ನು ರಂಗದ ಮೇಲೆ ತರುವ ಪ್ರಯತ್ನ ಮಾಡಬೇಕಾಗಿದೆ ಎಂದರು. ಜಿಲ್ಲಾ ರಂಗಭೂಮಿ ಸಂಘದ ಎಂ. ವಿ. ನಾಗಣ್ಣನವರು, ನಂಜಪ್ಪ ಶೆಟ್ಟರು ಸಂಗೀತ ಮತ್ತು ನಿರ್ದೇಶನ ನೀಡಿದ ಗೊಲ್ಲಳ್ಳಿ ಬಾಲಕೃಷ್ಣ, ನಾಟಕ ರಚಿಸಿದ ಕೆ ಮಂಜುನಾಥ ಕೊಟೆಕೆರೆ ಹಾಗೂ ಸಾಲುಮರದ ತಿಮ್ಮಕ್ಕ ಸಮುದಾಯ ಸೇವಾ ಟ್ರಸ್ಟ್(ರಿ) ಮುಖ್ಯಸ್ಥ ಡಿಸಿ ಕುಮಾರ್ ಇವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ನಾಟಕಕ್ಕೆ ಸಂಗೀತ ಸಹಕಾರ ನೀಡಿದ ಕ್ಯಾಶಿಯೊ ವಾದಕ ವೆಂಕಟೇಶ್ವರ ಗರುಗದೊಡ್ಡಿ, ತಬಲಾ ವಾದನ ಸಹಕಾರ ನೀಡಿದ ರಾಜಣ್ಣ ಮಾರಿಪಾಳ್ಯ ನಾಟಕದಲ್ಲಿ ಒನಕೆ ಓಬವ್ವ ಪ್ರಧಾನ ಪಾತ್ರ ನಿರ್ವಹಿಸಿ ಎಲ್ಲರ ಗಮನ ಸೆಳೆದ ಕಲಾವಿದೆ ರೂಪ ಸತೀಶ ತಿಪಟೂರು, ಜಯಕುಮಾರ್, ಎ ವಿ. ನಾಗರಾಜು ಅರಕೆರೆ, ಬಾಲಾಜಿ, ಪ್ರಜ್ವಲ್,ಮಂಜಮ್ಮ, ನಾರಾಯಣ ದೊಮ್ಮನಕುಪ್ಪೆ, ಕೆ ರಾಜಣ್ಣ (ರಂಗಭೂಮಿ ರಾಜಣ್ಣ), ನಾಗಮಣಿ ಇಂದ್ರಜಿತ್ ಮುಂತಾದ ಕಲಾವಿದರಿಗೆ ಪ್ರಶಸ್ತಿ ಪತ್ರ ವಿತರಿಸಿದರು.

ಕಡತ ನಾಶಪಡಿಸಲು ಯತ್ನ; ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲು

ಚಿಕ್ಕನಾಯಕನಹಳ್ಳಿ: ತಾಲೂಕು ಕಚೇರಿಯಲ್ಲಿ ಚಿಕ್ಕನಾಯಕನಹಳ್ಳಿ: ತಾಲೂಕು ಕಚೇರಿಯ ಆಡಳಿತ ಶಾಖೆಗೆ ಅಕ್ರಮವಾಗಿ ಪ್ರವೇಶಿಸಿ, ತಿದ್ದುಪಡಿ ಕಡತದಲ್ಲಿದ್ದ ಸರ್ಕಾರಿ ದಾಖಲೆಗಳನ್ನು ನಾಶಪಡಿಸಲು ಯತ್ನಿಸಿದ್ದಲ್ಲದೆ, ಕರ್ತವ್ಯನಿರತ ನೌಕರರಿಗೆ ಅಡ್ಡಿಪಡಿಸಿದ ಘಟನೆಗೆ ಸಂಬಂಧಿಸಿದಂತೆ ಎ.ಎಂ. ಲಿಂಗರಾಜು ಎಂಬುವವರ ವಿರುದ್ಧ ಚಿಕ್ಕನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆಯ ವಿವರ: ಅಕ್ಟೋಬರ್ 19, 2026ರಂದು ಮಧ್ಯಾಹ್ನ ಸುಮಾರು 2:40ರ ಸಮಯದಲ್ಲಿ ತಾಲೂಕು ಕಚೇರಿಯ 3ನೇ ಕೌಂಟರ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿಷಯ ನಿರ್ವಾಹಕರು ಕಡತಗಳನ್ನು ಟೇಬಲ್ ಮೇಲೆ ಬಿಟ್ಟು ಊಟಕ್ಕೆ ತೆರಳಿದ್ದರು. ಈ ವೇಳೆ ಅಲ್ಲಿಗೆ ತೆರಳಿದ ಅಜ್ಜೇನಹಳ್ಳಿಯ ಎ.ಎಂ. ಲಿಂಗರಾಜು (45) ಅವರು ಯಾವುದೇ ಅಧಿಕೃತ ಅನುಮತಿ ಇಲ್ಲದೆ, ಕಸಬಾ ಹೋಬಳಿ ಬ್ಯಾಟರಂಗನಹಳ್ಳಿಯ ಸರ್ವೆ ನಂಬರ್ 34ರ ಆರ್.ಆರ್.ಟಿ ತಿದ್ದುಪಡಿ ಕಡತವನ್ನು ತೆಗೆದುಕೊಂಡು ಆರ್.ಆರ್.ಟಿ ಶಿರಸ್ತೇದಾರ್ ಟೇಬಲ್ ಬಳಿ ಕುಳಿತು ದಾಖಲೆಗಳನ್ನು ನಾಶಪಡಿಸಲು ಯತ್ನಿಸಿದ್ದಾರೆ. ಅಲ್ಲದೆ, ಕಡತದ ದಾಖಲೆಗಳ ಫೋಟೋಗಳನ್ನು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ.

ಇದನ್ನು ಪ್ರಶ್ನಿಸಿದ ಶಿರಸ್ತೇದಾರ್ ಹಾಗೂ ಇಂದಿರಾ ಸಿಬ್ಬಂದಿ ಜತೆ ಆರೋಪಿಯು ಏರುಧ್ವನಿಯಲ್ಲಿ ಮಾತನಾಡಿ, ಸಾರ್ವಜನಿಕರ ಕೆಲಸ ನಿರ್ವಹಣೆಗೂ ಅಡ್ಡಿಪಡಿಸಿದ್ದಾರೆ. ತಾಲೂಕು ತಹಶೀಲ್ದಾರ್ ಅವರು ಕಚೇರಿಯ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಆರೋಪಿಯ ಕೃತ್ಯವು ದೃಢಪಟ್ಟಿದೆ.

ತಹಶೀಲ್ದಾರ್ ಹಾಗೂ ಸಿಬ್ಬಂದಿಯ ದೂರಿನ ಮೇರೆಗೆ ಚಿಕ್ಕನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ (ಃಓಖ)-2023ರ ಸೆಕ್ಷನ್ 221 ಮತ್ತು 324(3) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಸಣ್ ಸುದ್ದಿ

ಬಾಕಿ ಇರುವ ಸಂಪುಟ ಭರ್ತಿ ಹಾಗೂ ನಿಗಮ ಮಂಡಳಿ ನೇಮಕ ವಿಚಾರ ಮಾತುಕತೆ



ಸೂರ್ಯಪ್ರಗತಿನ್ಯೂಸ್.ಕಾಂ

ಸಿಎಂ ಡಿಕೆ ಶಿವಕುಮಾರ್ ಅವರು ದೆಹಲಿಗೆ ತೆರಳಿದ್ದು, ಕೇಂದ್ರ ಸಚಿವರನ್ನು ಭೇಟಿ ಮಾಡಿ ರಾಜ್ಯದ ಹಲವು ಯೋಜನೆಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ಇದೇ ವೇಳೆ ಕಾಂಗ್ರೆಸ್ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದ್ದು, ಬಾಕಿ ಇರುವ ಸಂಪುಟ ಭರ್ತಿ ಹಾಗೂ ನಿಗಮ ಮಂಡಳಿ ನೇಮಕ ವಿಚಾರ ಮಾತುಕತೆ ಮಾಡಿದ್ದಾರೆ. ಅಲ್ಲದೇ ನಿಗಮ ಮಂಡಳಿ ನೇಮಕ ಸಹ ಫೈನಲ್ ಆಗಿದ್ದು, ಪಟ್ಟಿಯನ್ನು ಡಿಕೆ ಶಿವಕುಮಾರ್ ಅವರಿಗೆ ನೀಡಿದ್ದಾರೆ. ಆದ್ರೆ, ವಿಧಾನಪರಿಷತ್ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಪಟ್ಟಿಯನ್ನು ಪ್ರಕಟಿಸಿಲ್ಲ. ಈ ಬಗ್ಗೆ ಸ್ವತಃ ಡಿಕೆಶಿ ಮಾಧ್ಯಮಗಳ ಮುಂದೆ ಹೇಳಿಕೊಂಡಿದ್ದಾರೆ.

ಹೈಕಮಾಂಡ್ ಭೇಟಿ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಡಿಕೆ ಶಿವಕುಮಾರ್, ನವದೆಹಲಿಗೆ ಬಂದ ಮೇಲೆ ಹೈಕಮಾಂಡ್ ಭೇಟಿ ಸಹಜ. ನಿಗಮ ಮಂಡಳಿ ನೇಮಕ ವಿಚಾರ ಚರ್ಚೆ ಮಾಡಿದ್ದೇವೆ ಸಂಪುಟ ಭರ್ತಿ ಬಗ್ಗೆಯೂ ವರಿಷ್ಠರ ಗಮನಕ್ಕೆ ತಂದಿದ್ದೇನೆ. ಹೊಸಬರಿಗೆ ಅವಕಾಶ ಕೊಡಬೇಕು ಎಂದು ಹೇಳಿದ್ದೇನೆ. ಇನ್ನು ನಿಗಮ ಮಂಡಳಿ ಡೈರೆಕ್ಟರ್

ಹಿಂದೂ ಮಹಾಗಣಪತಿ ದಶಮಾನೋತ್ಸವ ಸಮಿತಿ ಸಭೆ ವೈಭವದಿಂದ ಹತ್ತನೇ ಉತ್ಸವ ಆಚರಿಸಲು ತೀರ್ಮಾನ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನಗರದ ಬಿಜಿಎಸ್ ವೃತ್ತದ ನಾಗರಕಟ್ಟೆಯ ಈ ವರ್ಷದ ಹಿಂದೂ ಮಹಾ ಗಣಪತಿ ಪ್ರತಿಷ್ಠಾಪನೆ ಹಾಗೂ ವಿಸರ್ಜನಾ ಮಹೋತ್ಸವ ವೈಭವದಿಂದ ನೆರವೇರಿದ್ದು, ಮುಂದಿನ ವರ್ಷ 10ನೇ ಮಹೋತ್ಸವವನ್ನು ವಿಶಿಷ್ಟವಾಗಿ ಆಚರಣೆ ಮಾಡಲು ಸ್ವಾಗತ ಅಧ್ಯಕ್ಷ ಟಿ.ಬಿ. ಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮುಂದಿನ ವರ್ಷ ಹಿಂದೂ ಮಹಾ ಗಣಪತಿಯ ಹತ್ತನೇ ಮಹೋತ್ಸವ ನಡೆಯಬೇಕಿದ್ದು, ಶ್ರದ್ಧಾಭಕ್ತಿ, ಧಾರ್ಮಿಕ ಪರಂಪರೆಯಂತೆ, ಆಕರ್ಷಣೀಯವಾಗಿ ಅದ್ದೂರಿಯಾಗಿ ಆಚರಣೆ ಮಾಡಬೇಕು. ಈ ಸಂಬಂಧ ಈಗಿನಿಂದಲೇ ಯೋಜನೆಗಳನ್ನು ರೂಪಿಸಲು ಸಭೆ ತೀರ್ಮಾನಿಸಿತು.

ಹಿಂದೂ ಸಮಾಜದ ಹಾಗೂ ಲೋಕ ಕಲ್ಯಾಣಾರ್ಥ ಕಳೆದ ವರ್ಷ ನಾಗರಕಟ್ಟೆ ಗಣಪತಿ ದೇವಸ್ಥಾನದಲ್ಲಿ ಹಿಂದೂ ಮಹಾ ಗಣಪತಿಯನ್ನು ಪ್ರತಿಷ್ಠಾಪಿಸಿ 9ನೇ ವರ್ಷದ ಸ್ವಾಮಿಯ ವಿಸರ್ಜನೆಯನ್ನು ಅದ್ದೂರಿಯಾಗಿ ನೆರವೇರಿಸಲಾಗಿದ್ದು, ಸಾವಿರಾರು ಜನ ಉತ್ಸವದ ಸಂಭ್ರಮವನ್ನು ಕಣ್ತುಂಬಿಕೊಂಡರು. ಈ ಯಶಸ್ಸಿನಿಂದ ಪ್ರೇರಿತವಾಗಿರುವ ಸ್ವಾಗತ ಸಮಿತಿ ಮುಂದಿನ ವರ್ಷ ಮತ್ತಷ್ಟು ವಿಶಿಷ್ಟತೆ, ವೈಭವದಿಂದ ಆಚರಿಸಲು ನಿರ್ಧರಿಸಿತು.

ಈ ವರ್ಷದ ಹಿಂದೂ ಮಹಾಗಣಪತಿಯ ಉತ್ಸವದ ಯಶಸ್ಸಿಗೆ ಸಹಕರಿಸಿದ ಹರ-ಗುರು ಚರಮೂರ್ತಿಗಳು, ಹಿಂದೂ ಸಮಾಜದ ಬಾಂಧವರು, ಕಲಾತಂಡಗಳ ಕಲಾವಿದರು, ಪೊಲೀಸ್, ಬೆಸ್ಕಾಂ, ಅರಣ್ಯ ಇಲಾಖೆ ಅಧಿಕಾರಿಗಳಿಗೆ, ಶ್ರಮಿಸಿದ ಸ್ವಾಗತ ಸಮಿತಿ ಸದಸ್ಯರಿಗೆ ಅಧ್ಯಕ್ಷ ಟಿ.ಬಿ. ಶೇಖರ್ ಧನ್ಯವಾದ ತಿಳಿಸಿದರು. ಗಣೇಶೋತ್ಸವದ ದಶಮಾನೋತ್ಸವವನ್ನು ಗೌರವಾಧ್ಯಕ್ಷ ಸಿ.ವಿ. ಮಹದೇವಯ್ಯರವರ ನೇತೃತ್ವ ಹಾಗೂ ಟಿ.ಬಿ. ಶೇಖರ್‌ರವರ ಅಧ್ಯಕ್ಷತೆಯಲ್ಲೇ ನಡೆಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಉಪಾಧ್ಯಕ್ಷರಾದ ಮಂಜೇಶ್ ಕುಮಾರ್, ಮನು, ಗೌರವ ಪ್ರಧಾನ ಕಾರ್ಯದರ್ಶಿ ಡಾ.ಆರ್.ಎಲ್. ರಮೇಶ್‌ಬಾಬು, ಗೌರವ ಕಾರ್ಯದರ್ಶಿ ಆರ್. ಕೃಷ್ಣಯ್ಯ, ಸಹ ಕಾರ್ಯದರ್ಶಿ ಮಾರಣ್ಣ ಪಾಳೆಗಾರ್, ಖಜಾಂಚಿ ಟಿ.ವೈ. ಯಶಸ್, ನಿರ್ದೇಶಕರಾದ ಎಸ್.ಎನ್. ಕೃಷ್ಣಯ್ಯ, ಬಿ.ಎಸ್. ಮಹೇಶ್, ವಸಂತ್‌ಕುಮಾರ್, ಭಾನುಪ್ರಕಾಶ್ ಡಿ, ರವಿ ಕುಮಾರ್, ಶ್ರೀಧರ್, ಗೋಕುಲ್ ಮಂಜುನಾಥ್, ರೇಣುಕಾರಾಧ್ಯ, ದಿವಾಕರ್‌ನಾಯ್ಡು, ಸುಬ್ರಹ್ಮಣ್ಯ, ನೇತಾಜಿ ರಾಮಕೃಷ್ಣ, ನಾಗರತ್ನಮ್ಮ, ಶೃತಿ ಮಧುಕರ್, ಸುಜಾತ ನಂಜೇಗೌಡ, ಬೃಂದಾಮಣಿ, ಮಧುಶ್ರೀ ಮತ್ತು ಹಲವು ಕಾರ್ಯಕರ್ತರು ಸಭೆಯಲ್ಲಿ ಭಾಗವಹಿಸಿದ್ದರು.

ಹಬ್ಬಗಳ ಆಚರಣೆಯಿಂದ ದೇಶ ಭಕ್ತಿ, ಧಾರ್ಮಿಕ ಚಿಂತನೆ ಜಾಗೃತಿ: ಶಿವಸಿದ್ಧೇಶ್ವರ ಸ್ವಾಮೀಜಿ ತುಮಕೂರು ದಸರಾ ಸಮಿತಿಯ ದಸರಾ ಉತ್ಸವದ ಸಾಮೂಹಿಕ ಶಮಿ ಪೂಜೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ತುಮಕೂರುದಸರಾ ಸಮಿತಿಯ 36ನೇ ವರ್ಷದದಸರಾ ಮಹೋತ್ಸವದ ಅಂಗವಾಗಿ ಬುಧವಾರ ಸಿದ್ಧಗಂಗಾ ಮಠದ ಶಿವಸಿದ್ಧೇಶ್ವರ ಸ್ವಾಮೀಜಿಗಳ ಸಾನಿಧ್ಯದಲ್ಲಿ ಸಾಮೂಹಿಕ ಶಮಿ ಪೂಜಾ ಕಾರ್ಯಕ್ರಮ ಭಕ್ತಿ ಸಡಗರದಿಂದ ನೆರವೇರಿತು.

ನಗರದ ಕೆ.ಆರ್.ಬಡಾವಣೆಯ ಶ್ರೀರಾಮ ಮಂದಿರದಲ್ಲಿ ಮೂರು ದಿನಗಳಿಂದ ನಡೆದ ದಸರಾ ಕಾರ್ಯಕ್ರಮದ ಕೊನೆ ದಿನದ ಸಮಾರಂಭದ ದಿವ್ಯಸಾನಿಧ್ಯವಹಿಸಿ ಮಾತನಾಡಿದ ಶಿವಸಿದ್ಧೇಶ್ವರ ಸ್ವಾಮೀಜಿ, ರಾಷ್ಟ್ರಭಕ್ತಿ, ಧಾರ್ಮಿಕಚಿಂತನೆ ಹಿನ್ನೆಲೆಯಲ್ಲಿ ಹಬ್ಬಗಳ ಆಚರಣೆಯಿಂದ ಭಾರತದ ಸಂಸ್ಕೃತಿ, ಪರಂಪರೆ ವಿಶ್ವದಲ್ಲೇ ವಿಶೇಷವಾಗಿದೆ. ನಮ್ಮಲ್ಲಿ ರಾಷ್ಟ್ರೀಯ, ಧಾರ್ಮಿಕ ಹಬ್ಬಗಳ ಆಚರಣೆ ಮಾಡಲಾಗುತ್ತದೆ. ಭಾವೈಕ್ಯತೆ, ರಾಷ್ಟ್ರಕ್ಕಾಗಿಕೊಡುಗೆ ನೀಡಿದ ಮಹನೀಯರ ಸ್ಮರಣೆ, ನಾಗರೀಕ ಪ್ರಜ್ಞೆ ಮೂಡಿಸಲುರಾಷ್ಟ್ರೀಯ ಹಬ್ಬಗಳು ಸಹಕಾರಿಯಾಗಿವೆ. ಧಾರ್ಮಿಕ ಹಬ್ಬಗಳು, ಧರ್ಮ ಜಾಗೃತಿ, ಸಂಸ್ಕೃತಿ, ಪರಂಪರೆಯನ್ನು ಮುಂದಿನ ತಲೆಮಾರಿಗೆ ತಲುಪಿಸುವ ಆಶಯ ಹೊಂದಿವೆ ಎಂದು ಹೇಳಿದರು.

ವಿಜಯದಶಮಿ ಆಚರಣೆ ಎಂದರೆ ಅಧರ್ಮದ ವಿರುದ್ಧ ಧರ್ಮ, ಕೆಟ್ಟದರ ವಿರುದ್ಧ ಒಳ್ಳೆಯದು ಗೆಲ್ಲುವುದೇಆಗಿದೆ. ನಮ್ಮೊಳ್ಳಗಿನ ದೌರ್ಬಲ್ಯ ಗೆಲ್ಲುವ, ಆಂತರಿಕ ವಿಜಯ ಸಾಧಿಸುವ ಸಂಕೇತವೂ ಆಗಿದೆ. ನಿನ್ನನ್ನು ನೀನು ಗೆಲ್ಲುವುದು ನಿಜವಾದ ವಿಜಯವಾಗಿದೆ.ಆತ್ಮಶಕ್ತಿ ವೃದ್ಧಿಸಿಕೊಳ್ಳಬೇಕು ಎಂಬುದು ಹಬ್ಬದ ಆಚರಣೆಗಳ ಉದ್ದೇಶವೂಆಗಿದೆ. ಅನಕ್ಷರತೆ, ಅಪೌಷ್ಟಿಕತೆ, ಬಾಲಾಪರಾಧ, ಮಾದಕವ್ಯಸನ, ಯುವಶಕ್ತಿಯ ತಲ್ಲಣ ಮುಂತಾದ ಸಮಸ್ಯೆಗಳು ಸಮಾಜ ಮತ್ತು ದೇಶವನ್ನು ಕಾಡುತ್ತಿವೆ. ಇವುಗಳ ವಿರುದ್ಧ ಹೋರಾಟ ಮಾಡಿಗೆಲ್ಲ ಬೇಕಾಗಿದೆ ಎಂದು ಶಿವಸಿದ್ಧೇಶ್ವರ ಸ್ವಾಮೀಜಿ ಹೇಳಿದರು. ದಸರಾ ಉತ್ಸವವೆಂದರೆ ಆಡಂಬರ, ವಿಜೃಂಭಣೆಯಿಂದ ಆಚರಿಸುವುದಲ್ಲ, ಧಾರ್ಮಿಕ ಚಿಂತನೆ ಇಟ್ಟುಕೊಂಡು ಹೇಗೆ ಆಚರಣೆ ಮಾಡಬೇಕು ಎಂಬುದನ್ನು ತುಮಕೂರು ದಸರಾ ಸಮಿತಿ 36 ವರ್ಷಗಳಿಂದ ಆಚರಣೆ ಮೂಲಕ ತೋರಿಸಿದೆ. ದೇಶಭಕ್ತಿ, ಈ ನೆಲದ ಕಾನೂನು ಗೌರವಿಸುವುದು, ಸಮಾಜದ ಕೆಡುಕುಗಳ ನಿವಾರಣೆಗೆ ಧಾರ್ಮಿಕ ಆಚರಣೆಗಳಿಂದ ಸಾಧ್ಯವಾಗಲಿ ಎಂದು ಆಶಿಸಿದರು.

ಶಾಸಕ ಜಿ.ಬಿ. ಜ್ಯೋತಿಗಣೇಶ್ ಮಾತನಾಡಿ, 36 ವರ್ಷಗಳಿಂದ ನಾಗರೀಕರ ಸಹಯೋಗದಲ್ಲಿದಸರಾ ಸಮಿತಿಯು ನಮ್ಮ ಸಂಸ್ಕೃತಿ, ಸಂಪ್ರದಾಯಗಳ ಮಹತ್ವ ಸಾರುತ್ತಾ ದಸರಾ ಉತ್ಸವ ಆಚರಿಸಿಕೊಂಡು ಬರುತ್ತಿದೆ. 1991ರಲ್ಲಿ ಬಾಳೆಹೊನ್ನೂರು ಪೀಠದ ಸ್ವಾಮೀಜಿಗಳು ಈ ದಸರಾ ಉತ್ಸವಕ್ಕೆ ನಾಂದಿ ಹಾಡಿದರು. ಆಗಿನಿಂದ ಮಾಜಿ ಸಚಿವ ದಿ. ಲಕ್ಷ್ಮೀನರಸಿಂಹಯ್ಯ, ಸಿ.ವಿ. ಮಹದೇವಯ್ಯ, ಕೋರಿ ಮಂಜಣ್ಣ ಮೊದಲಾದವರು ಮುನ್ನಡೆಸಿಕೊಂಡು ಬಂದರುಎಂದು ಸ್ಮರಿಸಿದರು.

ದಸರಾ ಸಮಿತಿ ಕಾರ್ಯಾಧ್ಯಕ್ಷ ಡಾ.ಜೆ.ಲಕ್ಷ್ಮೀಕಾಂತ್ ಮಾತನಾಡಿ, ಏನೇ ಅಡೆ ತಡೆಗಳು ಎದುರಾದರೂ ದಸರಾ ಸಮಿತಿಯುವ ದಸರಾ ಆಚರಣೆಯನ್ನು ಲೋಪವಾಗದಂತೆ ಆಗಿನಿಂದಲೂ ನಡೆಸಿಕೊಂಡು ಬರುತ್ತಿದೆ. ಇದಕ್ಕೆ ಎಲ್ಲಾ ಸಮಾಜದ ಮುಖಂಡರು ಸಹಕಾರ ನೀಡಿದ್ದಾರೆಎಂದು ತಿಳಿಸಿದರು.

ಪ್ರಾಸ್ತಾವಿಕ ನುಡಿಗಳಾಡಿದ ಸಮಿತಿ ಖಜಾಂಚಿಜಿ.ಎಸ್. ಬಸವರಾಜು, ತುಮಕೂರು ದಸರಾ ಸಮಿತಿಯು ನೋಂದಾಯಿತ ಸಮಿತಿ, ತುಮಕೂರಿನಲ್ಲಿ ದಸರಾ ಆಚರಣೆ ಮಾಡುವ ಏಕೈಕ ಅಧಿಕೃತ ಸಮಿತಿ. ಕಳೆದ 35 ವರ್ಷಗಳಿಂದ ಸ್ವಾಭಿಮಾನದಿಂದ ಆಚರಿಸಿ ಕೊಂಡು ಬರಲಾಗುತ್ತಿದೆ. ಪ್ರತಿ ವರ್ಷ ದಸರಾ ಉತ್ಸವದ ಖರ್ಚುವೆಚ್ಚದ ಲೆಕ್ಕವನ್ನು ಸಾರ್ವಜನಿಕವಾಗಿ ಪ್ರಕಟಿಸಿ ಪಾರದರ್ಶಕತೆ ಕಾಪಾಡಿಕೊಂಡು ಬಂದಿದೆ. ಈ ಕಾರಣದಿಂದ ಸಮಿತಿ ಬಗ್ಗೆ ಸಾರ್ವಜನಿಕರಲ್ಲಿ ವಿಶ್ವಾಸ ಹೆಚ್ಚಾಗಿದೆಎಂದರು.

ಮೂರು ವರ್ಷಗಳಿಗೆ ಮೊದಲು ಸರ್ಕಾರಿ ಜ್ಯೂನಿಯರ್ ಕಾಲೇಜುಮೈದಾನದಲ್ಲಿದಸರಾಉತ್ಸವಆಚರಿಸಲಾಗುತ್ತಿತ್ತು. ಜಿಲ್ಲಾಡಳಿತ ಕಾಲೇಜು ಮೈದಾನದಲ್ಲಿ ಆಚರಿಸಲು ಆರಂಭಿಸಿದಾಗಿನಿಂದ ರಾಮಮಂದಿರಆವರಣದಲ್ಲಿಆಚರಣೆ ಮಾಡಲಾಗುತ್ತಿದೆ.ಗಣಪತಿ ಸೇವಾ ಮಂಡಳಿ ಮುಖಂಡರು, ಪೌರಕಾಮಿಕರು, ವಿವಿಧ ಕ್ಷೇತ್ರಗಳ ಸಾಧಕರನ್ನು ಗೌರವಿಸಿಕೊಂಡು ಬರಲಾಗುತ್ತಿದೆ. ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಲಾಗುತ್ತಿದೆ ಎಂದು ಜಿ.ಎಸ್. ಬಸವರಾಜು ಹೇಳಿದರು.



ದಸರಾ ಸಮಿತಿ ಅಧ್ಯಕ್ಷ ಬಿ.ಎಸ್. ಮಂಜುನಾಥ್, ಉತ್ಸವ ಸಮಿತಿ ಅಧ್ಯಕ್ಷ ಕೋರಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಮಹೇಶ್, ಕಾರ್ಯದರ್ಶಿ ಪರಶುರಾಮಯ್ಯ, ಸಂಯೋಜಕ ಕೆ.ಎನ್. ಗೋವಿಂದರಾವ್, ಸಹ ಸಂಯೋಜಕ ಕಿರಣ್, ಸಂಚಾಲಕರಾದ ಗ.ಸಿ. ಶ್ರೀನಿವಾಸಮೂರ್ತಿ, ಮುಖಂಡರಾದ ನಾಗೇಂದ್ರ ಪ್ರಸಾದ್, ಎಂ.ಕೆ. ನಾಗರಾಜ ರಾವ್, ಪದಾಧಿಕಾರಿಗಳಾದ ನಾಗರಾಜ ಶೆಟ್ಟಿ, ಪ್ರಸಾದ್, ಓಂಕಾರೇಶ್ವರಿ, ಕಲ್ಪನಾ ಪ್ರಸಾದ್, ಅನಿತಾರಮೇಶ್, ವಿಜಯರವೀಂದ್ರ, ಶೃತಿ ಮೊದಲಾದವರು ಭಾಗವಹಿಸಿದ್ದರು.

ನಿಟ್ಟೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್‌ಗೆ ರಂಜಿ ವರ್ಮ ಎನ್.ಆರ್. ಹೆಸರು ಮುಂಚೂಣಿಯಲ್ಲಿ?

ಜನಸೇವೆಯ ಮೂಲಕ ಜನಮನ್ನಣೆ ಗಳಿಸಿದ ಯುವ ನಾಯಕನಿಗೆ ಟಿಕೆಟ್ ನೀಡುವಂತೆ ಸ್ಥಳೀಯರ ಒಲವು

ವರದಿ ಗುಬ್ಬಿ ಭರತ್

ಸೂರ್ಯಪ್ರಗತಿನ್ಯೂಸ್.ಕಾಂ



ಗುಬ್ಬಿ: ಗುಬ್ಬಿ ತಾಲೂಕಿನ ನಿಟ್ಟೂರು ತಾಲೂಕು ಪಂಚಾಯಿತಿ ಕ್ಷೇತ್ರದಲ್ಲಿ ಮುಂಬರುವ ಚುನಾವಣೆಯ ರಾಜಕೀಯ ಚಟುವಟಿಕೆಗಳು ಗರಿಗೆದರತೊಡಗಿದ್ದು, ಕಾಂಗ್ರೆಸ್ ಪಕ್ಷದ ಪ್ರಬಲ ಆಕಾಂಕ್ಷಿಯಾಗಿ ಸವ್ಯಸಾಚಿ ಡಾ. ಜಿ. ಪರಮೇಶ್ವರ್ ಯುವ ಬ್ರಿಗೇಡ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ರಂಜಿ ವರ್ಮ ಎನ್.ಆರ್. ಅವರ ಹೆಸರು ಸ್ಥಳೀಯ ವಲಯದಲ್ಲಿ ಕೇಳಿಬರುತ್ತಿದೆ. ಸಾಮಾಜಿಕ ಹಾಗೂ ಸಾರ್ವಜನಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ರಂಜಿ ವರ್ಮ ಅವರು, ಜನರೊಂದಿಗೆ ನಿಕಟ ಸಂಪರ್ಕ ಹೊಂದುವ ಮೂಲಕ ತಮ್ಮದೇ ಆದ ಗುರುತನ್ನು ಮೂಡಿಸಿಕೊಳ್ಳುತ್ತಿದ್ದಾರೆ. ವಿವಿಧ ಜನಪರ ಕಾರ್ಯಗಳಲ್ಲಿ ತೊಡಗಿಸಿಕೊಂಡು ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ಅವರ ಕಾರ್ಯವೈಖರಿ ಕುರಿತು ಸ್ಥಳೀಯವಾಗಿ ಚರ್ಚೆಗಳು ನಡೆಯುತ್ತಿವೆ ಎನ್ನಲಾಗುತ್ತಿದೆ.

ನಿಟ್ಟೂರು ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ರಂಜಿ ವರ್ಮ ಅವರುಕಣಕ್ಕಿಳಿಯಬೇಕು ಎಂಬ ಅಭಿಪ್ರಾಯ ಸ್ಥಳೀಯ ಜನವಲಯದಲ್ಲಿ ವ್ಯಕ್ತವಾಗುತ್ತಿದೆ. ಜನರೊಂದಿಗೆ ಬೆರೆತು ಕೆಲಸ ಮಾಡುವ ಯುವ ನಾಯಕತ್ವಕ್ಕೆ ಪಕ್ಷ ಅವಕಾಶ ನೀಡಬೇಕು ಎಂಬ ನಿರೀಕ್ಷೆಯೂ ಕೆಲವರಲ್ಲಿ ಕಂಡುಬರುತ್ತಿದೆ.

ಕ್ಷೇತ್ರದ ಅಭಿವೃದ್ಧಿ, ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದನೆ ಹಾಗೂ ಜನಸಾಮಾನ್ಯರ ಧ್ವನಿಯಾಗಿ ಕಾರ್ಯನಿರ್ವಹಿಸುವ ನಾಯಕತ್ವದ ಅಗತ್ಯದ ಹಿನ್ನೆಲೆಯಲ್ಲಿ ರಂಜಿ ವರ್ಮ ಅವರ ಹೆಸರು ಮುನ್ನೆಲೆಗೆ ಬರುತ್ತಿದೆ. ಯುವಕರನ್ನು ಒಳಗೊಂಡಂತೆ ಸ್ಥಳೀಯ ಜನರ ನಿರೀಕ್ಷೆಗಳಿಗೆ ಸ್ಪಂದಿಸುವ ನಾಯಕನಾಗಿ ಅವರು ಚುನಾವಣಾ ಕಣಕ್ಕಿಳಿಯಬೇಕೆಂಬ ಅಭಿಪ್ರಾಯಗಳು ಚರ್ಚೆಗೆ ಗ್ರಾಸವಾಗಿವೆ.

ಆದರೆ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ಹಾಗೂ ಅಧಿಕೃತ ಟಿಕೆಟ್ ಘೋಷಣೆ ಪಕ್ಷದ ವರಿಷ್ಠರ ನಿರ್ಧಾರಕ್ಕೆ ಒಳಪಟ್ಟಿದ್ದು, ಅಂತಿಮವಾಗಿ ಯಾರಿಗೆ ಅವಕಾಶ ದೊರೆಯಲಿದೆ ಎಂಬುದನ್ನು ಕಾದುನೋಡಬೇಕಿದೆ. ಒಟ್ಟಿನಲ್ಲಿ, ನಿಟ್ಟೂರು ತಾಲೂಕು ಪಂಚಾಯಿತಿ ಕ್ಷೇತ್ರದಲ್ಲಿ



ಕಾಂಗ್ರೆಸ್ ಟಿಕೆಟ್‌ನ ಪ್ರಬಲ ಆಕಾಂಕ್ಷಿಗಳ ಪೈಕಿ ರಂಜಿ ವರ್ಮ ಎನ್.ಆರ್. ಅವರ ಹೆಸರು ಸ್ಥಳೀಯ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿರುವುದು ಮುಂಬರುವ ಚುನಾವಣೆಯ ಕುತೂಹಲವನ್ನು ಹೆಚ್ಚಿಸಿದೆ.

2016–17ನೇ ಸಾಲಿನ ತುಮುಲ್ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿರುವ ಶಂಕೆ

ಆಡಳಿತ ಮಂಡಳಿಯ ಈ ನಿರ್ಧಾರ ಪ್ರಶ್ನಿಸಿ, ಹೈಕೋರ್ಟ್, ಸುಪ್ರಿಂ ಕೋರ್ಟಿನ ವರೆಗೆ ಹೋಗಿ ಗೆಲುವು

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ತುಮಕೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘ (ತುಮುಲ್) ನಲ್ಲಿ 2016–17ನೇ ಸಾಲಿನಲ್ಲಿ ನಡೆಸಿದ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿರುವ ಬಗ್ಗೆ ಶಂಕೆ ವ್ಯಕ್ತವಾಗಿದ್ದು, ಇತ್ತೀಚಿನ ಸುಪ್ರಿಂಕೋರ್ಟ್ ತೀರ್ಪು ಇದಕ್ಕೆ ಸಾಕ್ಷಿ ಎಂಬಂತೆ ಇದೆ. ಹಾಗಾಗಿ ಇಡೀ ನೇಮಕಾತಿ ಪ್ರಕ್ರಿಯೆಯನ್ನೇ ತನಿಖೆಗೆ ಒಳಪಡಿಸಬೇಕು ಎಂದು ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದ ಅರುಣ್ ಕುಮಾರ್, ವೆಂಕಟೇಶ್, ಶಾಂತಲಾ, ಶಾಂತರಾಜು, ರೇಣುಕಯ್ಯ, ಪುಟ್ಟರಾಜು, ರಜತ್ ಹಾಗೂ ಮಂಜುನಾಥ್ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಅತಿ ಹೆಚ್ಚು ಅಂಕಪಡೆದಿರುವ ಅಭ್ಯರ್ಥಿಗಳನ್ನು ಬಿಟ್ಟು, ಕಡಿಮೆ ಅಂಕ ಪಡೆದಿರುವ ಕೆಲವರಿಗೆ ಉದ್ಯೋಗ ನೀಡಲಾಗಿದೆ. ವೇಣು ಗೋಪಾಲ್ ಎಂಬುವವರು 102 ಅಂಕಗಳನ್ನು ಪಡೆದಿದ್ದು, ಮಧುಸೂಧನ್ ಎಂಬುವವರು 77 ಅಂಕ ಪಡೆದಿದ್ದರು. ಆದರೆ ಹೆಚ್ಚು ಅಂಕ ಪಡೆದ ವೇಣು ಗೋಪಾಲ್ ಎಂಬುವವರ ಬದಲಿಗೆ ಮಧು ಸೂಧನ್‌ಉದ್ಯೋಗ ನೀಡಲಾಗಿತ್ತು. ವೇಣು ಗೋಪಾಲ್ ಆಡಳಿತ ಮಂಡಳಿಯ ಈ ನಿರ್ಧಾರ ಪ್ರಶ್ನಿಸಿ, ಹೈಕೋರ್ಟ್, ಸುಪ್ರಿಂ ಕೋರ್ಟಿನ ವರೆಗೆ ಹೋಗಿ ಗೆಲುವು ಸಾಧಿಸಿದ್ದಾರೆ. ಇದೇ ಸುಮಾರು 35–40ರವರವಗೆ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ ಎಂದರು. ನೇರ ನೇಮಕಾತಿಯಲ್ಲಿ ಪಡೆದ ಅಂಕ ಮತ್ತು ಸಂದರ್ಶನದಲ್ಲಿ ಪಡೆದ ಅಂಕಗಳ ತುಲನೆ ಮಾಡಲು ಮೂಲ ದಾಖಲಾತಿಗಳನ್ನು ಕೇಳಿದರೆ ಕಳೆದು ಹೋಗಿದೆ ಎಂಬ ಸಬೂಬು ಹೇಳುತ್ತಿದ್ದಾರೆ. ಅಲ್ಲದೆ ಕಳೆದ ಅಕ್ಟೋಬರ್ 14ರಂದು ಆಡಳಿತ ವಿಭಾಗದಲ್ಲಿರುವ ಇಬ್ಬರು ಮಹಿಳಾ ಸಿಬ್ಬಂದಿಗಳು ಪರೀಕ್ಷೆಗೆ ಸಂಬಂಧಿಸಿದ ದಾಖಲಾತಿಗಳನ್ನು ನಕಲು ಮಾಡಿರುವುದು ಸಿಸಿಟಿವಿ ವಿಡಿಯೋದಲ್ಲಿ ದಾಖಲಾಗಿದ್ದರು ಸಹ ತುಮುಲ್ ಆಡಳಿತ ಆ ಇಬ್ಬರು ಮಹಿಳಾ ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮೀನಾ ಮೇಷ ಎಣಿಸುತ್ತಿದೆ. ತುಮುಲ್ ನೇಮಕಾತಿ ಅಕ್ರಮಗಳ ಬಗ್ಗೆ ನೊಂದ ಅಭ್ಯರ್ಥಿಗಳು ತುಮುಲ್ ಆಡಳಿತ ಮಂಡಳಿಗೆ ಹಾಗೂ ಸಹಕಾರ ಇಲಾಖೆಗೆ ದೂರು ನೀಡಿದ ಬೆನ್ನಲ್ಲೇ ದಾಖಲಾತಿಗಳನ್ನು ತಿದ್ದಲು ಪ್ರಭಾವಿಗಳು ಮುಂದಾಗಿದ್ದು, ಆತ್ಮೀಯ ನೌಕರರ ಮೂಲಕ ದಾಖಲಾತಿಗಳ ನಕಲನ್ನು ತರಿಸಿಕೊಂಡಿರಬಹುದುಎಂದು ಆರೋಪಿಸಿದರು. ಕೆಲ ಅಭ್ಯರ್ಥಿಗಳು ಸಂದರ್ಶನಕ್ಕೆ ಬರದಿದ್ದರೂ ಅವರಿಗೆ ಅಂಕಗಳನ್ನು ನೀಡಲಾಗಿದೆ ಎಂಬ ಆರೋಪ ಕೇಳಿ ಬಂದಿದೆ.ಈ ಬಗ್ಗೆ ಕೂಲಂಕಷ ತನಿಖೆ ನಡೆಯಬೇಕು.ನಕಲಿ ದಾಖಲೆಗಳ ಬಳಕೆಯ ಆರೋಪಗಳನ್ನೂ ಪರಿಶೀಲಿಸಿ, ತಪ್ಪು ದೃಢಪಟ್ಟರೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ನೊಂದ ಅಭ್ಯರ್ಥಿಗಳಾದ ನಮ್ಮಗಳ ಆಗ್ರಹವಾಗಿದೆ. ಮಾಜಿ ಸೈನಿಕರು, ಮಹಿಳೆಯರು ಹಾಗೂ ಇತರ ಮೀಸಲಾತಿ ವರ್ಗಗಳಿಗೆ ಸಂಬಂಧಿಸಿದ ನಿಯಮಗಳನ್ನು ಸರಿಯಾಗಿ ಪಾಲಿಸಲಾಗಿದೆಯೇ ಎಂಬುದನ್ನೂ ಪರಿಶೀಲಿಸಬೇಕೆಂದು ಮನವಿ ಮಾಡಲಾಗಿದೆ. ಮೀಸಲಾತಿ ಹುದ್ದೆಗಳನ್ನು ಇತರ ವರ್ಗದ ಅಭ್ಯರ್ಥಿಗಳಿಗೆ ನೀಡಿದ್ದರೆ, ಅದಕ್ಕೆ ಸಮರ್ಥ ಪ್ರಾಧಿಕಾರದ ಅನುಮತಿ ಇದೆಯೇ ಮತ್ತುರೋಸ್ಟರ್ ಹಾಗೂ ಮೆರಿಟ್ ನಿಯಮಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ದಾಖಲೆಗಳ ಆಧಾರದಲ್ಲಿ ಪರಿಶೀಲಿಸಬೇಕೆಂದು ಒತ್ತಾಯಿಸಿದ್ದಾರೆ.

ಮೂಲ ಅಂಕಪಟ್ಟಿಗಳು, ಉತ್ತರ ಪತ್ರಿಕೆಗಳು, ಸಂದರ್ಶನದ ಅಂಕಗಳು, ಆಯ್ಕೆಪಟ್ಟಿಗಳು ಮತ್ತು ನೇಮಕಾತಿ ಸಮಿತಿಯ ದಾಖಲೆಗಳನ್ನು ಪರಿಶೀಲಿಸಿ,ಅಕ್ರಮಗಳು ದೃಢಪಟ್ಟಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅನ್ಯಾಯಕ್ಕೆ ಒಳಗಾದ ಅರ್ಹ ಅಭ್ಯರ್ಥಿಗಳಿಗೆ ನಿಯಮಾನುಸಾರ ನ್ಯಾಯಒದಗಿಸುವ ನಿಟ್ಟಿನಲ್ಲಿ ಸ್ವತಂತ್ರ್ಯ ಸಂಸ್ಥೆಯಿಂದ ತನಿಖೆ ಮಾಡಲು ಸರಕಾರ ಮುಂದಾಗಬೇಕುಎನ್ನುವ ಮಾತುಗಳು ಕೇಳಿಬಂದಿವೆ. ಕೆಪಿಎಸ್ಸಿ ಹಗರಣದ ಮಾದರಿ ತುಮುಲ್ ನೇಮಕಾತಿ ಮಾದರಿಯಂದೇಎನ್ನುವಂತಾಗಿದ್ದು, ಕೆಪಿಎಸ್ಸಿಗೆ ಹಗರಣದಲ್ಲಿ ಸರಕಾರ ನಡೆಸುತ್ತಿರುವ ತನಿಖೆಯಂತೆ ತುಮುಲ್ ನಲ್ಲಿ ನಡೆದಿರುವ 2016–17ರ ನೇಮಕಾ ಅಕ್ರಮವನ್ನುತನಿಖೆಗೆ ಒಳಪಡಿಸಬೇಕು ಎಂದು ನೊಂದ ಅಭ್ಯರ್ಥಿಗಳು ತುಮುಲ್ ಆಡಳಿತ ಮಂಡಳಿಯನ್ನು ಆಗ್ರಹಿಸಿದ್ದಾರೆ.

ತುಮುಲ್‌ನಲ್ಲಿ 2016–17ನೇ ಸಾಲಿನ ನಡೆದಿರುವ ನೇಮಕಾತಿಯಲ್ಲಿ ಅಕ್ರಮವಾಗಿರುವ ಬಗ್ಗೆ ನೊಂದ ಅಭ್ಯರ್ಥಿಗಳು ತುಮುಲ್ ಆಡಳಿತ ಮಂಡಳಿಗೆ ದೂರು ನೀಡಿದ ನಂತರ ರಚಿಸಿದ ತನಿಖಾಯಾವ ತನಿಖೆಯನ್ನು ನಡೆಸದೇ ಸುಮ್ಮನಾಗಿದೆ. ನೇಮಕಾತಿಯಲ್ಲಿ ನೇಮಕಾತಿ ಪರೀಕ್ಷೆಯಲ್ಲಿಕಡಿಮೆ ಅಂಕಗಳಿ ಸಿರುವ, ನೇಮಕಾತಿಗೆ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಪಡೆಯದೇಇರುವ ಅಭ್ಯರ್ಥಿಗಳು ಹಾಗೂ ಸಂದರ್ಶನಅರ್ಹತೆಯೇಇಲ್ಲದ, ಸಂದರ್ಶನಕ್ಕೆ ಹಾಜರಾಗದವರು ಸಹ ಹೇಗೆ ನೇಮಕಗೊಂಡರು ಎನ್ನುವುದರ ಬಗ್ಗೆ ತನಿಖಾ ತಂಡ ಬಹಿರಂಗ ಪಡಿಸಬೇಕಿದೆ ಎಂದು ಸುದ್ದಿಗೋಷ್ಠಿಯಲ್ಲಿದ್ದ ನೊಂದ ಅಭ್ಯರ್ಥಿಗಳು ಒತ್ತಾಯಿಸಿದರು.

ಪಾವಗಡದಲ್ಲಿ ಭೀಕರ ರಸ್ತೆ ಅಪಘಾತ: ಕಾರು ಹಳ್ಳಕ್ಕೆ ಬಿದ್ದು ಚಾಲಕ ಸಾವು

ಸೂರ್ಯಪ್ರಗತಿನ್ಯೂಸ್.ಕಾಂ





ಪಾವಗಡ: ಪಾವಗಡ – ರಾಜವಂತಿ ಮಾರ್ಗದಲ್ಲಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಓರ್ವ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದು, ಚಾಲಕ ಗಾಯಗೊಂಡಿರುವ ಘಟನೆ ನಿನ್ನೆ ರಾತ್ರಿ ನಡೆದಿದೆ.

ದೂರುದಾರರು: ಕಣಿವೆನಹಳ್ಳಿ ಗ್ರಾಮದ ಅಕ್ಷತಾ ಕೊಂ ನರಸಿಂಹಮೂರ್ತಿ (28 ವರ್ಷ) ಅವರು ಪಾವಗಡ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಘಟನೆ ವಿವರ: ದೂರುದಾರರ ಪತಿ ನರಸಿಂಹಮೂರ್ತಿ ಅಲಿಯಾಸ್ ಮೂರ್ತಿ (ಜಿ.ಎಲ್.ಆರ್ ರವರೊಂದಿಗೆ ಮದುವೆಯಾಗಿದ್ದ) ಅವರು TOYOTA Etios ಕಾರು ಏಂ–02–ಉ–0661 ನ್ನು ಬಾಡಿಗೆಗೆ ಇಟ್ಟುಕೊಂಡಿದ್ದರು. ದಂಪತಿಗೆ ಪರಿವತ್ ಯಾದವ್ ಮತ್ತು ಲಕ್ಷಿತ್ ಯಾದವ್ ಎಂಬ ಇಬ್ಬರು ಮಕ್ಕಳಿದ್ದಾರೆ.

ದಿನಾಂಕ 21/10/2026 ರಂದು ರಾತ್ರಿ ನರಸಿಂಹಮೂರ್ತಿ ಅವರು ಪಾವಗಡ ಟೌನ್ ಶಾಂತಿನಗರದ ಡ್ರೈವರ್ ಚಂದ್ರಶೇಖರ್ (ಶೇಖರ್) ಜೊತೆಗೆ ತಮ್ಮ ಕಾರಿನಲ್ಲಿ ರಾಜವಂತಿಗೆ ಹೋಗುವುದಾಗಿ ಹೇಳಿ ಹೋಗಿದ್ದರು.

ರಾತ್ರಿ10–30ರ ಸುಮಾರಿಗೆ ರಾಜವಂತಿ ಗ್ರಾಮದ ಗೋವಿಂದ ಎಂಬುವರು ಫೋನ್ ಮಾಡಿ, ರಾಜವಂತಿ ಸಮೀಪದ ಗಂಗಾಬೇಕರಿ ಮಂಜುನಾಥ್ ರವರ ಜಮೀನಿನ ಸಮೀಪ ರಸ್ತೆ ಬದಿಯ ಹಳ್ಳಕ್ಕೆ ಕಾರು ಬಿದ್ದು, ಮೂರ್ತಿ ತಲೆಗೆ ಪೆಟ್ಟು ಬಿದ್ದು ಮೃತಪಟ್ಟಿದ್ದಾರೆ. ಚಾಲಕ ಶೇಖರ್ ಗಾಯಗೊಂಡು ಪಾವಗಡ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ ಎಂದು ತಿಳಿಸಿದ್ದಾರೆ. ನಂತರ ಅಕ್ಷತಾ ಅವರು ಪಾವಗಡ ಸರ್ಕಾರಿ ಆಸ್ಪತ್ರೆಗೆ ಬಂದು ನೋಡಿದಾಗ ಪತಿ ಮೃತಪಟ್ಟಿರುವುದು ಖಚಿತವಾಗಿದೆ.

ಅಪಘಾತಕ್ಕೆ ಕಾರಣ: ಸ್ಥಳದಲ್ಲಿದ್ದ ಶೇಖರ್ ಮತ್ತು ಗೋವಿಂದ ವಿಚಾರಣೆಯಿಂದ ತಿಳಿದುಬಂದಿದ್ದು, ರಾತ್ರಿ 9–30ರ ಸುಮಾರಿಗೆ ಪಾವಗಡ ಕಡೆಯಿಂದ ರಾಜವಂತಿ ಕಡೆಗೆ ಕಾರು ಹೋಗುವಾಗ ಚಾಲಕ ಶೇಖರ್ ರವರ ನಿಯಂತ್ರಣ ತಪ್ಪಿ ರಸ್ತೆ ಪಕ್ಕದಲ್ಲಿದ್ದ ಹಳ್ಳಕ್ಕೆ ಬಿದ್ದು ಪಲ್ಟಿಯಾಗಿದ್ದರಿಂದ ದೇಹದ ಮೇಲೆ ಪೆಟ್ಟು ಬಿದ್ದು ಮೃತಪಟ್ಟಿದ್ದಾರೆ.

ಚಾಲಕ ಶೇಖರ್ ಅತಿವೇಗ ಮತ್ತು ಅಜಾಗರೂಕತೆಯಿಂದ ಕಾರು ಚಾಲನೆ ಮಾಡಿದ್ದೇ ಅಪಘಾತಕ್ಕೆ ಕಾರಣ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಮೃತದೇಹ ಪಾವಗಡ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿದ್ದು, ಪಾವಗಡ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಪದವಿಧರರ ಕ್ಷೇತ್ರದ ಚುನಾವಣೆ ಎಂದರೆ ಅದು ಪ್ರಜ್ಞಾವಂತರ ಚುನಾವಣೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಪದವಿಧರರ ಕ್ಷೇತ್ರದ ಚುನಾವಣೆ ಎಂದರೆ ಅದು ಪ್ರಜ್ಞಾವಂತರ ಚುನಾವಣೆ. ಹಾಗಾಗಿ ರಾಜಕೀಯ ಪಕ್ಷಗಳಿಂತ ಪದವಿಧರರ ಪರವಾಗಿ ಕೆಲಸ ಮಾಡುವ ಅಭ್ಯರ್ಥಿಗಳನ್ನು ಮತದಾರರ ಬೆಂಬಲಿಸುವ ಸಾಧ್ಯತೆ ಹೆಚ್ಚಿದ್ದು, ಈ ಬಾರಿಯ ಚುನಾವಣೆಯಲ್ಲಿ ಸ್ವಾತಂತ್ರ ಅಭ್ಯರ್ಥಿಯಾಗಿರುವ ಕ್ರಮ ಸಂಖ್ಯೆ 10ರ ಅಭ್ಯರ್ಥಿಯಾದ ನನ್ನನ್ನು ಬೆಂಬಲಿಸುವಂತೆ ಆಗ್ನೇಯ ಪದವಿಧರರ ಕ್ಷೇತ್ರದ ಸ್ವತಂತ್ರ ಅಭ್ಯರ್ಥಿ ಅಡ್ವೋಕೇಟ್ ಬರೀದ್ ಮನವಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2020ರ ಚುನಾವಣೆಯಲ್ಲಿ 1.08 ಲಕ್ಷ ಇದ್ದ ಮತದಾರರು, 2026ರಲ್ಲಿ 1.84 ಲಕ್ಷಕ್ಕೆ ಹೆಚ್ಚಳವಾಗಿದೆ. ಚುನಾವಣೆಯ ಮೇಲೆ ನಂಬಿಕೆ ಇಟ್ಟಿರುವ ಪದವಿಧರರು ಹೆಚ್ಚು ಹೆಚ್ಚಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡಿದ್ದಾರೆ.ಈ ಮತದಾರರಿಗೆ ನ್ಯಾಯ ಒದಗಿಸಲು ರಾಷ್ಟ್ರೀಯ ಪಕ್ಷದಿಂದ ಗೆಲುವು ಸಾಧಿಸುವ ಅಭ್ಯರ್ಥಿಗಳಿಂದ ಸಾಧ್ಯವಿಲ್ಲ. ಪ್ರಶ್ನೆ ಕೇಳಲು ಪಕ್ಷದ ಹೈಕಮಾಂಡ್ ಮುಂದೆ ಅನುಮತಿಗೆ ಕಾಯಬೇಕಾದ ಪರಿಸ್ಥಿತಿ ಇದೆ. ಹಾಗಾಗಿ ಸ್ವತಂತ್ರ ಅಭ್ಯರ್ಥಿಯಾಗಿರುವ, ವಕೀಲನಾಗಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿರುವ, ಪದವಿಧರರ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವ ನನ್ನನ್ನು ಬೆಂಬಲಿಸಬೇಕೆಂದರು. ಆಗ್ನೇಯ ಪದವಿಧರರ ಕ್ಷೇತ್ರದ ಕಣದಲ್ಲಿ ಮೂರು ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಸೇರಿದಂತೆಒಟ್ಟು 10 ಜನರುಕಣದಲ್ಲಿದ್ದಾರೆ.ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಂದ ಪದವಿಧರರ ಹಿತ ಕಾಯುವ ಯಾವುದೇ ಭರವಸೆಗಳಿಲ್ಲ. ಕೇವಲ ಒಂದು ಪಕ್ಷದ ಅಭ್ಯರ್ಥಿಗಳಾಗಿ ಮಾತ್ರ ಕಣದಲ್ಲಿದ್ದಾರೆ. ಆದರೆ ಹಲವು ದಿನಗಳಿಂದ ಪದವಿಧರರ ಒಡನಾಟ ಇಟ್ಟುಕೊಂಡು ಅವರ ಬೇಕು, ಬೇಡಗಳನ್ನು ಗಮನಿಸಿರುವ ನಾನು ಆರು ಪ್ರಮುಖ ಅಂಶಗಳನ್ನು ಒಳಗೊಂಡ ಪ್ರಣಾಳಿಕೆ ನೀಡಿದ್ದು, ಎಲ್ಲವೂ ನೆರವೇರಿಸುವಂತಹುವುಗಳೇ ಆಗಿವೆ.ಪ್ರತಿ ಜಿಲ್ಲೆಗಳಲ್ಲಿ ಡೀ.ಸಿ. ನೇತೃತ್ವದಲ್ಲಿ ಪದವಿಧರರ ವೇದಿಕೆ ಸ್ಥಾಪನೆ, ಪದವಿಧರರ ದುಖಃ ದುಮ್ಮಾನಗಳಿಗೆ ಸ್ಪಂದಿಸಲು ಡಿಜಿಟಲ್ ಸಂಪರ್ಕ ಪೋರ್ಟಲ್, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಗ್ರಂಥಾಲಯಗಳ ಆಧುನೀಕರಣ ಮತ್ತು ಡಿಜಿಟಲೀಕರಣ, ಖಾಸಗಿ ಶಿಕ್ಷಕರು ಮತ್ತು ಉಪನ್ಯಾಸಕರ ಕಲ್ಯಾಣಕ್ಕೆ ಅದ್ಯತೆ, ನ್ಯಾಯಾಲಯಗಳಿಗೆ ಸೌರ ವಿದ್ಯುತ್ ಸೌಲಭ್ಯ, ಕನ್ನಡ ಮಾಧ್ಯಮದಲ್ಲಿ ಗುಣಮಟ್ಟದ ವೃತ್ತಿಪರ ಶಿಕ್ಷಣ ಇವು ನಮ್ಮ ಅದ್ಯತೆಗಳಾಗಿವೆ ಎಂದು ಅಡ್ವೋಕೇಟ್ ಬರೀದ್ ತಿಳಿಸಿದರು.

ಪದವಿಧರರ ಕ್ಷೇತ್ರದ ಚುನಾವಣೆ ಎಂದರೆ ಕೇವಲ ಆಯ್ಕೆಯಲ್ಲ. ಅದು ಪದವಿಧರರ ಹಕ್ಕು ಮತ್ತು ನಿರುದ್ಯೋಗಿ ಯುವಕರ ಭವಿಷ್ಯ ಮತ್ತು ಶಿಕ್ಷಕರ ಸಮಸ್ಯೆಗಳಿಗೆ ಧ್ವನಿಯಾಗಲು ದೊರೆಯುವ ಅವಕಾಶವಾಗಿದೆ. ಪದವಿಧರರ ಸಮಸ್ಯೆಗಳಿಗೆ ಸ್ಪಂದಿಸುವುದು, ವಿಧಾನ ಪರಿಷತ್ತಿನಲ್ಲಿ ಪದವಿಧರರ ಪರಧ್ವನಿ ಎತ್ತುವುದು, ನನ್ನಗುರಿಅಧಿಕಾರವಲ್ಲ, ಸೇವೆ ನನ್ನ ಸಂಕಲ್ಪ.ಹಣದ ಆಮೀಷಕ್ಕೆ ಒಳಗಾಗದೆ ಪ್ರಾಮಾಣಿಕತೆ ಮತ್ತು ಬದ್ಧತೆಗೆ ಮನ್ನಣೆ ನೀಡಿ, ಕ್ರಮ ಸಂಖ್ಯೆ 10 ಅಡ್ವೋಕೇಟ್ ಬರೀದ್ ಹೆಸರಿನ ಮುಂದೆ 1 ಎಂದು ಬರೆಯುವ ಮೂಲಕ ಗೆಲುವಿಗೆ ಸಹಕಾರಿಯಾಗುವಂತೆ ಬರೀದ್ ಮನವಿ ಮಾಡಿದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. GMAIL: suryapragathi2021@gmail.com.